ಮಾನಸಿ

ತಿಂಗಳ ಪತ್ರಿಕೆ

ಆಗಸ್ಟ್ : 1999

- ಹೆಣ್ಣಿನ ಭಾಷೆ
- ಕೇಟ್ ಚಾಪಿನ್‌ಳ 'ದಿ ಅವೇಕನಿಂಗ್'
- ಮಹಿಳೆಯ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆಯ ಅವಶ್ಯಕತೆ
- ವರದಕ್ಷಿಣೆ ಸಾವುಗಳು - ಸತ್ಯ ಶೋಧನಾ ವಿಚಾರಣೆ
- ಮಹಿಳೆಯರಿಗಾಗಿ ಸತ್ಯದ ಆಯೋಗ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 14 ಸಂಚಿಕೆ : 7

ಆಗಸ್ಟ್ : 1999

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



ಸಂಪಾದಕೀಯ

ವರದಕ್ಷಿಣೆಯ ಬೇಡಿಕೆಯು ಹೆಣ್ಣುಮಕ್ಕಳ ಅಮಾನುಷ ಕೊಲೆಗಳಲ್ಲಿ ಕೊನೆಗೊಳ್ಳುತ್ತಿರುವುದು ಗಾಬರಿಯನ್ನುಂಟು ಮಾಡುವ ಸಂಗತಿ. ಈ ಅಮಾನುಷ ಕ್ರೌರ್ಯ ತೀವ್ರಗತಿಗಳಲ್ಲಿ ಹೆಚ್ಚುತ್ತಿರುವುದರ ಜೊತೆಯಲ್ಲಿ ಈ ಸಾವುಗಳನ್ನು ತೀರಾ ಸಹಜವೆಂಬಂತೆ ಸ್ವೀಕರಿಸುತ್ತಿರುವ ನಮ್ಮ ಜಡ್ಡುಗಟ್ಟಿದ ಮನಸ್ಸು ಇನ್ನೂ ಆತಂಕಕಾರಿಯಾದ ಸಂಗತಿಯಾಗಿದೆ.

"ಮದುವೆ" ಮಾನವೀಯತೆಯ ಸಂಬಂಧವನ್ನು ಮೀರಿ ವ್ಯಾಪಾರೀಕರಣದ ಪರಮಾವಧಿಯನ್ನು ತಲುಪಿದೆ. 'ಮದುವೆ' ಮಹಿಳೆಯರಿಗೆ ಭದ್ರತೆ ನೀಡುವ ಬದಲಾಗಿ ಕತ್ತುಹಿಸುಕಿ ಕೊಲೆ ಮಾಡುತ್ತಿದೆ. ಮದುವೆಯಾಗಿ ಒಂದೆರಡು ವರ್ಷಗಳಲ್ಲಿ ಹೆಣ್ಣುಮಕ್ಕಳನ್ನು ಕೊಲೆ ಮಾಡಿ 'ಆತ್ಮಹತ್ಯೆ'ಯೆಂಬ ಹಣೆಪಟ್ಟಿ ಹಚ್ಚಿ ಆರೋಪದಿಂದ ತಪ್ಪಿಸಿಕೊಳ್ಳಲು ಸುಲಭವಾದ ಒಳದಾರಿಗಳನ್ನು ನಮ್ಮ ಭ್ರಷ್ಟ ವ್ಯವಸ್ಥೆ ಅವಕಾಶ ಮಾಡಿಕೊಡುತ್ತಿದೆ.

ವರದಕ್ಷಿಣೆಗಾಗಿ ನಡೆಸಿದ 'ಕೊಲೆ'ಗಳನ್ನು ಅಸಹಜ ಸಾವುಗಳೆಂದೊ ಅಥವಾ ಆತ್ಮಹತ್ಯೆಯೆಂದೊ ಪ್ರಕರಣವನ್ನು ದಾಖಲು ಮಾಡಲಾಗುತ್ತದೆ. ವಿಚಾರಣೆ ನಡೆಯುವ ಪ್ರಾಥಮಿಕ ಹಂತದಿಂದ, ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳುವುದು; ಪಂಚನಾಮೆ; ದೂರನ್ನು ದಾಖಲಿಸುವುದು, ಮರಣೋತ್ತರ ಪರೀಕ್ಷೆ ಹೀಗೆ ಎಲ್ಲಾ ಹಂತಗಳಲ್ಲಿ ಅಧಿಕಾರಿಗಳ ಭ್ರಷ್ಟತನದಿಂದಾಗಿ ಆರೋಪಿಯ ಪರವಾಗಿಯೇ ದಾಖಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ನಡೆಯುವ ಈ ತಪ್ಪುಗಳಿಂದಾಗಿ ಬಹಳಷ್ಟು ಪ್ರಕರಣಗಳು ಸಾಕ್ಷ್ಯಾಧಾರಗಳ ಕೊರತೆಯಿಂದ ಬಿದ್ದುಹೋಗುತ್ತವೆ.

ವರದಕ್ಷಿಣೆಯ ಕ್ರೌರ್ಯದಿಂದ ತಪ್ಪಿಸಿಕೊಳ್ಳಲು ಹೆಣ್ಣುಮಕ್ಕಳಿಗೆ ಯಾವುದೇ ದಿಕ್ಕಿನಲ್ಲಿ ದಾರಿಯಿಲ್ಲದೆ ಬಂಧಿಸಲಾಗುತ್ತಿದೆ. ಅಮಾನುಷ ವಾತಾವರಣದಿಂದ ಹೊರಬಂದು ಧೈರ್ಯದಿಂದ ಬದುಕುತ್ತೇನೆನ್ನುವ ಹೆಣ್ಣುಮಕ್ಕಳಿಗೆ ಬೆಂಬಲ ನೀಡುವ ಅವಕಾಶ, ಪೂರಕ ಸನ್ನಿವೇಶವನ್ನು ನಿರ್ಮಿಸಿ ಕೊಡುವುದಕ್ಕೆ ನಮ್ಮ ಸಮಾಜ ಒತ್ತುನೀಡುವುದಿಲ್ಲ. ಸಮಾಜದ ನಿಂದನೆ, ವಿವಾಹದ ಬಾಂಧವ್ಯದ ವೈಭವೀಕರಣ ಅವಳನ್ನು ಸಾಕುವ ಆರ್ಥಿಕ ಹೊರೆ, ಮುಂತಾದ ಕಾರಣ ನೀಡಿ ತಂದೆ, ತಾಯಂದಿರು ಪುನಃ ಅವಳನ್ನು ವಾಪಸ್ಸು ಕಳಿಸಿ ಕ್ರೌರ್ಯಕ್ಕೆ ಬಲಿ ನೀಡುತ್ತಾರೆ.

ವರದಕ್ಷಿಣೆಯ ಬೇಡಿಕೆಯು ಗ್ರಾಹಕ ಸಂಸ್ಕೃತಿಯಿಂದಾಗಿ ನಗರ ಪ್ರದೇಶಗಳಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿರುವುದು ಕಳವಳಕಾರಿ ವಿಷಯವಾಗಿದೆ. ತುಂಬಾ ಸುಲಭವಾಗಿ, ಶೀಘ್ರಗತಿಯಲ್ಲಿ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಇದೊಂದು ಸಾಂಸ್ಕೃತಿಕವಾಗಿ ಸಮ್ಮತಿ ನೀಡಿದ ಹಾದಿಯಾಗಿದೆ.

ವರದಕ್ಷಿಣೆಯ ಅಮಾನುಷ ದೌರ್ಜನ್ಯದಿಂದ ಬದುಕುಳಿದುಳಿದು ಹೊರಬರುವ ಹೆಣ್ಣುಮಕ್ಕಳಿಗೆ ಬದುಕುವ ಹಕ್ಕನ್ನು ಕಲ್ಪಿಸಿಕೊಡುವುದು ಸಮಾಜದ ಆದ್ಯ ಕರ್ತವ್ಯವಾಗಿದೆ. ವಿವಾಹ ಮತ್ತು ಬದುಕುವ ಹಕ್ಕು ಇವುಗಳಲ್ಲಿ ಆಯ್ಕೆಯ ಪ್ರಶ್ನೆ ಬಂದಾಗ, ಬದುಕುವ ಹಕ್ಕನ್ನು ಮುಕ್ತವಾಗಿ ಆಯ್ಕೆ ಮಾಡಿಕೊಳ್ಳುವ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಕಲ್ಪಿಸಿಕೊಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಹೆಣ್ಣಿನ ಭಾಷೆ

ಭಾಷಾಶಾಸ್ತ್ರದ ಇತ್ತೀಚಿನ ಅಧ್ಯಯನಗಳಲ್ಲಿ ಸಮಾಜವನ್ನು ಅದು ಬಳಸುವ ಭಾಷೆಯ ಮೂಲಕ ಅರ್ಥಮಾಡಿಕೊಳ್ಳ ಬಹುದೆಂಬ ಒಂದು ಚಿಂತನೆ ರೂಪುಗೊಂಡು ಸಮಾಜೋ ಭಾಷಾಶಾಸ್ತ್ರ ಎಂಬ ಒಂದು ಪ್ರತ್ಯೇಕ ಅಧ್ಯಯನವಾಗಿ ಬೆಳೆದಿದೆ.

ಭಾಷೆಯ ಹುಟ್ಟು, ಬೆಳವಣಿಗೆ ಹಾಗೂ ವಿಕಾಸದ ಚರಿತ್ರೆಯಲ್ಲಿ ಭಾಷಾ ವಿಕಲ್ಪಗಳ ಅಧ್ಯಯನ ಅತ್ಯಂತ ಕುತೂಹಲಕಾರಿಯಾದದ್ದು. ಸಮುದಾಯಗಳು ವೈವಿಧ್ಯಗಳನ್ನು ಒಳಗೊಂಡಂತೆಲ್ಲಾ ಅವು ಬಳಸುವ ಭಾಷೆಯೂ ಅಷ್ಟೇ ವೈವಿಧ್ಯ ಮಯವಾಗುತ್ತದೆ. ಅಷ್ಟೇ ಏಕೆ? ಒಂದೇ ಸಮುದಾಯದಲ್ಲೂ ವಿವಿಧ ಕಾರಣಗಳಿಗಾಗಿ ಮತ್ತೆ ಹಲವು ಬಗೆಯ ಭಾಷಾ ವೈವಿಧ್ಯಗಳು ಕಾಣಿಸಿಕೊಳ್ಳುತ್ತವೆ. ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಭಾಷೆಯೊಂದರಲ್ಲಿ ಕಾಣಿಸಿಕೊಳ್ಳುವ ವಿಕಲ್ಪಗಳ ಅಧ್ಯಯನವು ಪರೋಕ್ಷವಾಗಿ ಆ ಸಾಮಾಜಿಕ ಸಂದರ್ಭಗಳ ಅಧ್ಯಯನದ ಒಂದು ಮುಖ್ಯ ಸಾಧನವೇ ಆಗಿದೆ.

ಒಂದು ಸಮುದಾಯದಲ್ಲಿ ಎಲ್ಲ ವ್ಯಕ್ತಿಗಳೂ ಆ ಭಾಷೆಯನ್ನು ಒಂದೇ ರೀತಿಯಲ್ಲಿ ಬಳಸುವುದಿಲ್ಲ. ಇನ್ನೂ ಮುಂದುವರೆದು ಹೇಳಬೇಕೆಂದರೆ ಒಬ್ಬನೇ ವ್ಯಕ್ತಿ ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಅದೇ ಭಾಷೆಯನ್ನು ಒಂದೇ ರೀತಿಯಾಗಿ ಬಳಸುವುದಿಲ್ಲ. ಜಾತಿ, ವರ್ಗ, ಶೈಕ್ಷಣಿಕ ಸ್ಥಾನಮಾನ, ಪ್ರಾದೇಶಿಕತೆ ಹಾಗೂ ಲಿಂಗ ಭೇದಗಳಿಗನುಸಾರವಾಗಿ ಸಮುದಾಯದಲ್ಲಿ ಭಾಷಿಕ ವಿಕಲ್ಪಗಳು ಪ್ರಕಟಗೊಳ್ಳುತ್ತವೆ. ಭಾಷೆಯಲ್ಲಿ ತೋರಿಬರುವ ವಿಕಲ್ಪಗಳು ತಮ್ಮಷ್ಟಕ್ಕೇ ಸ್ಥಾನಮಾನಗಳನ್ನು ವಿಂಗಡಿಸುವ ಅಂಶಗಳಲ್ಲವಾದರೂ, ಸಮಾಜವು ವಿಭಿನ್ನ ಸಮುದಾಯಗಳ ಬಗೆಗೆ ಹೊಂದಿರುವ ಹಲವು ಪೂರ್ವ ನಿರ್ಧಾರಿತ ಕಲ್ಪನೆಗಳನ್ನೂ, ಆ ಸಮುದಾಯಗಳು ಸಮಾಜದಲ್ಲಿ ಹೊಂದಿರುವ ಸ್ಥಾನಮಾನಗಳನ್ನೂ, ಆ ಸಮುದಾಯಗಳನ್ನು ಸಮಾಜವು ನಿರ್ದೇಶಿಸಿ ನಿರ್ವಚಿಸುವ ಕ್ರಮವನ್ನೂ ಭಾಷಾ ವಿಕಲ್ಪಗಳು ವಿವರಿಸಬಲ್ಲವು.

ಭಾಷಾ ಲಕ್ಷಣಕ್ಕೆ ಇರುವ ಈ ಸಾಮರ್ಥ್ಯವನ್ನು ಆಧಾರ ಮಾಹಿತಿಯನ್ನಾಗಿ ಬಳಸಿ ಸಮಾಜದ ವಿವಿಧ ಸಮುದಾಯಗಳಲ್ಲಿನ ಅಸಮಾನತೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಯತ್ನಿಸಬಹುದು. ಭಾಷೆಯನ್ನು ಅದರ ವಿವಿಧ ನೆಲೆಗಳಲ್ಲಿ ವಿವರವಾಗಿ ಅಧ್ಯಯನ ಮಾಡುವುದು ಭಾಷಾಶಾಸ್ತ್ರದ ಆಸಕ್ತಿ. ಸಮಾಜವನ್ನು ಕುರಿತ ಅಧ್ಯಯನ ಸಮಾಜಶಾಸ್ತ್ರದ ಆಸಕ್ತಿ. ಆದರೆ ಸಮಾಜ ಶಾಸ್ತ್ರಜ್ಞನು ಭಾಷಾಶಾಸ್ತ್ರದ ನೆರವಿನಿಂದ ತನ್ನ ಅಧ್ಯಯನ ಕ್ಷೇತ್ರಕ್ಕೆ ಹೊಸದೊಂದು ಆಯಾಮವನ್ನು ಕಂಡುಕೊಳ್ಳುವುದು ಸಾಧ್ಯ.

ಭಾಷಾ ವಿಕಲ್ಪಗಳು ಹುಟ್ಟಿಕೊಳ್ಳುವ ಸಂದರ್ಭಗಳ ವಿವರಗಳು ಆ ಸಮುದಾಯಗಳಲ್ಲಿ ಹುಟ್ಟಿಕೊಂಡಿರುವ ವಿಕಲ್ಪಗಳ ಸೂಚಕಗಳೇ ಆಗಿರುತ್ತವೆ. ಈ ಚಿಂತನೆಯನ್ನಾಧರಿಸಿ ಸಮಾಜದ ವಿವಿಧ ಸಮುದಾಯಗಳ ನಡುವೆ ಇರುವ ಅಸಮಾನತೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಅಧ್ಯಯನಗಳು ಸಾಕಷ್ಟು ನಡೆದಿವೆ. ಜಾತಿ, ವರ್ಗ, ಪ್ರಾದೇಶಿಕತೆ, ಶೈಕ್ಷಣಿಕ ಸ್ಥಾನಮಾನ ಹಾಗೂ ಲಿಂಗ ಭೇದಗಳಿಗನುಸಾರವಾಗಿ ಒಂದೇ ಭಾಷೆಯಲ್ಲಿ ಹಲವು ವಿಕಲ್ಪಗಳು ತೋರಿಬರುವ ಬಗ್ಗೆ ಒಟ್ಟಾರೆಯಾಗಿ ಹಲವು ಸೈದ್ಧಾಂತಿಕ ವಿಚಾರಗಳನ್ನು ನಿದರ್ಶನ ಸಹಿತವಾಗಿ, ನಿರೂಪಿಸುವ ಕ್ಷೇತ್ರಾಧ್ಯಯನಗಳು ಹಲವಾರು ನಡೆದಿವೆ. ಈ ಪೈಕಿಯ ಸಣ್ಣದೊಂದು ಎಳೆಯನ್ನು ವಿಸ್ತರಿಸಿಕೊಳ್ಳುವ ಮೂಲಕ, ನಮ್ಮ ಸಮಾಜದಲ್ಲಿ ಹೆಣ್ಣು ಮತ್ತು ಗಂಡುಗಳ ಬಗ್ಗೆ ಇರುವ ಕೆಲವು ಅಭಿಪ್ರಾಯಗಳು, ಅವರಿಗೆ ಸಮಾಜವು ನೀಡುವ ಹಲವು ನಿರ್ದೇಶನಗಳು ಹಾಗೂ ಅವರನ್ನು ಕುರಿತು ಸಮಾಜವು ವ್ಯಕ್ತ ಮಾಡುವ ನಿರ್ವಚನಗಳು ನಮ್ಮ ಭಾಷೆಯಲ್ಲಿ ಪಡೆದುಕೊಂಡಿರುವ ಆಕಾರಗಳನ್ನು ನೋಡಬಹುದಾಗಿದೆ. ಹಾಗೆಯೇ ಈ ಅಭಿಪ್ರಾಯ, ನಿರ್ದೇಶನ, ನಿರ್ವಚನಗಳನ್ನು ಹೆಣ್ಣು ಗಂಡುಗಳು ಹೇಗೆ ಸ್ವೀಕರಿಸಿದ್ದಾರೆಂಬುದಕ್ಕೆ ಅವರು ಬಳಸುವ ಭಾಷೆಯಲ್ಲಿ ದೊರಕುವ ಹಲವು ಸೂಚನೆಗಳನ್ನೂ ಗುರುತಿಸಬಹುದಾಗಿದೆ.

ಭಾಷಿಕ ಅಧ್ಯಯನಗಳಿಗಾಗಿ ಮಾಹಿತಿಗಳನ್ನು ಕಲೆ ಹಾಕುವಾಗ ಸಮಾಜದ ಎಲ್ಲ ಸ್ತರಗಳಿಂದಲೂ ಮಾದರಿಗಳನ್ನು ಪಡೆಯಲಾಗಿದ್ದು, ಭಾಷಿಕ ವಿಕಲ್ಪಗಳಿಗೂ ಸಾಮಾಜಿಕ ವಿಕಲ್ಪಗಳಿಗೂ ಇರುವ ಗಾಢವಾದ ಸಂಬಂಧಗಳನ್ನು ಗುರುತಿಸಲಾಗಿದೆ. ಆದರೂ ಈ ವಿಕಲ್ಪಗಳ ಬಗೆಗಳು ಹೆಣ್ಣು ಗಂಡುಗಳ ಭಾಷೆಯ ಬಳಕೆಯಲ್ಲಿ ಹೇಗೆ ವ್ಯಕ್ತವಾಗಿವೆ ಎಂಬ ಅಧ್ಯಯನ ತೀರಾ ಇತ್ತೀಚಿನದು. ಗಂಡು ಹೆಣ್ಣುಗಳಲ್ಲಿ

ಅಸಮಾನತೆ ಇರುವುದನ್ನು ವಿರೋಧಿಸಿ ಚಿಂತನೆಗಳೂ, ಚಳುವಳಿಗಳೂ ನಡೆಯುತ್ತಿವೆ. ಇವುಗಳಿಗೆ ಒಂದು ಅರ್ಥಪೂರ್ಣ ಚಾಲನೆ ದೊರಕಬೇಕೆಂದರೆ ಬಲವಾದ ಸೈದ್ಧಾಂತಿಕ ಚೌಕಟ್ಟಿನ ನಿರ್ಮಾಣದ ತೀವ್ರ ಅಗತ್ಯವಿದೆ. ಅಸಮಾನತೆಯ ಸ್ವರೂಪದ ಎಲ್ಲ ಆಯಾಮಗಳನ್ನೂ ಅರ್ಥಮಾಡಿಕೊಳ್ಳುವುದು ಬಲವಾದ ಸಿದ್ಧಾಂತವನ್ನು ರೂಪಿಸಿಕೊಳ್ಳಲು ಮುಖ್ಯ ಆಧಾರದ ಸಂಗತಿ. ಸಮಾಜದ ಹೆಣ್ಣು ಗಂಡುಗಳು ಒಂದೇ ಭಾಷೆಯನ್ನು ಹೇಗೆ ವಿಭಿನ್ನವಾಗಿ ಬಳಸುತ್ತಾರೆ ಎಂಬುದನ್ನು ಗಮನಿಸುವುದು ಈ ದೃಷ್ಟಿಯಿಂದ ಕುತೂಹಲಕರ. ಈ ವಿಭಿನ್ನ ರೀತಿಯ ಭಾಷಾ ಬಳಕೆಯು ಸಮಾಜದ ಯಾವ ನಿಲುವುಗಳನ್ನೂ, ಯಾವ ಮೌಲ್ಯಗಳನ್ನು ಸೂಚಿಸುತ್ತದೆ ಎಂಬುದರ ಅಧ್ಯಯನ ಕೂಡ ಅಷ್ಟೇ ಕುತೂಹಲಕರ.

ಮೊದಲಿಗೆ ಒಂದು ಸಮುದಾಯದಲ್ಲಿ ವ್ಯಕ್ತಿಗಳು ತಮ್ಮನ್ನು ಹೇಗೆ ಗುರುತಿಸಿಕೊಳ್ಳುತ್ತಾರೆ ಎಂಬುದನ್ನು ನೋಡೋಣ. ಗುರುತಿಸಿಕೊಳ್ಳುವ ಮೊದಲ ಹಂತವೆಂದರೆ ತಮ್ಮ ಸಮುದಾಯವನ್ನು ಸಮಾಜದ ಇತರ ಸಮುದಾಯಗಳೊಂದಿಗೆ ಇಟ್ಟು ಹೋಲಿಸಿಕೊಳ್ಳುವುದು. ಇಂಥಾ ಹೋಲಿಕೆಯ ಅಭಿಲಾಷೆ ಕೀಳರಿಮೆ ಇರುವಲ್ಲಿ ಹೆಚ್ಚಾಗಿರುತ್ತದೆ. ಅಂದರೆ ಜಾತಿ, ವರ್ಗ, ಶಿಕ್ಷಣ, ಲಿಂಗ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಮಾಜವು ಕೆಲವು ನಿಶ್ಚಿತ ಅಭಿಪ್ರಾಯಗಳನ್ನು ಹೇಳುತ್ತದೆ. ಒಂದು ಸಮುದಾಯ 'ಕೀಳು' ಎಂಬ ಅಭಿಪ್ರಾಯವಿದೆ ಎನ್ನಿ. ಆ 'ಕೀಳಾದ' ಸಮುದಾಯ ಸಮಾಜದ ಈ ಅಭಿಪ್ರಾಯಕ್ಕೆ ಎರಡು ರೀತಿಗಳಲ್ಲಿ ಪ್ರತಿಕ್ರಿಯಿಸಬಹುದು. ಒಂದೋ ಈ ಪರಿಗಣನೆಯನ್ನು ಒಪ್ಪಿಕೊಂಡುಬಿಡಬಹುದು. ಅಥವಾ ಈ ಪರಿಗಣನೆಯನ್ನು ತಿರಸ್ಕರಿಸಬಹುದು.

ಸಮುದಾಯವೊಂದು ಸಮಾಜವು ತನ್ನ ಬಗೆಗೆ ನೀಡಿದ ಅಭಿಪ್ರಾಯವನ್ನು ಒಪ್ಪಿಕೊಂಡಿದೆ ಎಂಬುದಕ್ಕೆ ಅದು ಕೆಲವು ಕುರುಹುಗಳನ್ನು ತೋರುತ್ತದೆ. ವ್ಯಕ್ತಿಯು ತನ್ನದೇ ಗುಂಪಿನ ಇತರರೊಂದಿಗೆ ತನ್ನನ್ನು ಹೋಲಿಸಿಕೊಳ್ಳುವುದು. ಉದಾಹರಣೆಗೆ ಮಹಿಳೆಯು ಇತರ ಮಹಿಳೆಯರೊಂದಿಗೆ ಹೋಲಿಸಿಕೊಂಡು ತನ್ನ ಮೇಲ್ಮೆಯನ್ನು ತೋರಲು ಪ್ರಯತ್ನಿಸುತ್ತಾಳೆ. ಸಮಾಜವು ಅಡಿಗೆ, ಹೊಲಿಗೆ, ಹಾಡು, ನರ್ತನ, ಗೃಹಾಲಂಕಾರದಂತಹವುಗಳು ಮಹಿಳೆಯ ಕಾರ್ಯಕ್ಷೇತ್ರಗಳೆಂದು ನಿರ್ದೇಶಿಸಿದೆ. ಮಹಿಳೆ ಈ ನಿರ್ದೇಶವನ್ನು ಪಾಲಿಸುತ್ತಾಳೆ, ಈ ಪಾಲನೆಯಲ್ಲಿ ತನ್ನ ಸಾಧನೆಯೇ ಉತ್ತಮವಾದದ್ದೆಂದು ನಿರೂಪಿಸಲು ಹೆಣಗುತ್ತಾಳೆ. ಈ ಹೆಣಗುವಿಕೆ ಆಕೆಯು ಸಮಾಜವು ಹೆಣ್ಣಿನ ಕ್ಷೇತ್ರವನ್ನು ಗುರುತಿಸಿದ್ದನ್ನು ವಿಧೇಯಳಾಗಿ ಒಪ್ಪಿದ ಒಂದು ಕುರುಹು. ತಾನು 'ಕೀಳು' ಎಂಬುದನ್ನು ಒಪ್ಪಿದ ಕುರುಹು ಇನ್ನೊಂದು ಬಗೆಯಲ್ಲೂ ಕಾಣಿಸಿಕೊಳ್ಳಬಹುದು. ಮೇಲುಗುಂಪಿನೊಂದಿಗೆ ಸಾಂಕೇತಿಕವಾಗಿಯಾದರೂ ಸೇರಿಕೊಳ್ಳಲು ಪ್ರಯತ್ನಿಸುವುದರ ಮೂಲಕ ತನಗಿಂತ ಆ ಗುಂಪು 'ಮೇಲು' ಎಂಬುದನ್ನು ಒಪ್ಪುವುದು. ಉದಾಹರಣೆಗೆ ಮಹಿಳೆಯು ಗಂಡಸು ಮಾಡುವ ಕೆಲಸಗಳನ್ನು ತಾನೂ ಮಾಡಿ ತೋರಿಸಲು ಹೆಣಗುವುದು. ಮಾತುಕತೆ, ವೇಷಭೂಷಣ, ವೃತ್ತಿ ಮೊದಲಾದವುಗಳಲ್ಲಿ ಆಕೆ ಗಂಡಿನ ರೀತಿಯನ್ನು ಅನುಕರಿಸುತ್ತಾಳೆ. ಪ್ಯಾಂಟು, ಶರ್ಟುಗಳನ್ನು ತೊಡುವುದು, ಕ್ರಾಪ್ ಕಟ್ ಮಾಡಿಕೊಳ್ಳುವುದು ಮಾತ್ರವಲ್ಲದೆ ತನ್ನ ನಡಿಗೆಯ ವಿಧಾನ, ಮಾತಿನ ರೀತಿ ನೀತಿ, ಧ್ವನಿಗಳಲ್ಲೂ ಗಂಡಸಿನ ಮಾದರಿಯನ್ನು ಅನುಕರಿಸಬಹುದು. ರಾಜಕೀಯ, ಕ್ರೀಡೆ ಮೊದಲಾದವುಗಳನ್ನು ಮಾತಿನ ವಸ್ತುವಾಗಿ ಆಯ್ಕೆ ಮಾಡಿ ಆಳವಾದ ಗಂಭೀರ ಧ್ವನಿಯಲ್ಲಿ ಚರ್ಚಿಗಿಳಿಯುವ ರೂಢಿ ಮಾಡಿಕೊಳ್ಳಬಹುದು. ಮನೆ, ಮಕ್ಕಳು, ಅಡಿಗೆಗಳಂತಹ ವಸ್ತುಗಳೆಂದರೆ ಹರಟೆಗಳೆಂದು ಲಘುವಾಗಿ ಕಂಡು ದೂರವಿರುವುದು, ಯಾವುದನ್ನೇ ಹೇಳಲು ಖಡಾಖಂಡಿತವಾದ ಭಾಷೆಯನ್ನು ಬಳಸುವುದು - ಇಂಥವು ಕೂಡ ಗಂಡಸರ ಮಾದರಿ ಎಂಬುದರಿಂದಾಗಿ ಅವಳಲ್ಲಿ ಮೆಚ್ಚುಗೆಯನ್ನು ಪಡೆಯುತ್ತವೆ.

ಅದೇ ಸಮಾಜದ ಪರಿಗಣನೆಯನ್ನು ತಾನು ಲಕ್ಷಿಸುವುದಿಲ್ಲ ಎಂಬುದನ್ನು ತೋರುವ ಕುರುಹುಗಳು ಸ್ವಲ್ಪ ವಿಭಿನ್ನವಾಗಿರುತ್ತವೆ. ಮೇಲುಗುಂಪಿನವರನ್ನು ಅನುಕರಿಸುವ ಬದಲು ಇಲ್ಲಿ ಸಮಾನತೆಯ ಹಕ್ಕನ್ನು ಸಾಧಿಸುವ ಯತ್ನ ಕಾಣುತ್ತದೆ. ಯಾವ ತನ್ನ ಗುಣಗಳನ್ನು ಸಮಾಜವು 'ಕೀಳು' ಎಂದು ಪಟ್ಟಿ ಮಾಡಿತೋ ಆ ಗುಣಗಳನ್ನೇ ಮರು ನಿರ್ವಚನ ಮಾಡಿ ಉನ್ನತವಾದವೆಂದು ನಿರೂಪಿಸುವ ಯತ್ನವೂ ನಡೆಯುತ್ತದೆ. ಉದಾಹರಣೆಗೆ ಮಹಿಳೆಯು ತಾನು ಕೂಡ ಈ ಸಮಾಜದಲ್ಲಿ ಗಂಡಸಿಗೆ ಸಮಾನಳು. ತನ್ನನ್ನು ಎರಡನೆಯ ದರ್ಜೆಗೆ ಇಳಿಸಿ ನೋಡುವ ಸಮಾಜದ ದೃಷ್ಟಿಯನ್ನು ತಾನು ನಿರಾಕರಿಸುತ್ತೇನೆ. ಸಮಾಜವು ಹೇಳುವಂತೆ ತನ್ನ ನಿರ್ವಹಣೆಯ ಕಾರ್ಯಕ್ಷೇತ್ರಗಳು ಯಾವ ಕಾರಣಕ್ಕೂ ಎರಡನೆಯ ದರ್ಜೆಯವಲ್ಲ. ಅವೂ ಕೂಡ ಗಂಡಸಿನ ಕಾರ್ಯಗಳಷ್ಟೇ ಪ್ರಮುಖವಾದವು ಎಂಬುದನ್ನು ಗಟ್ಟಿಯಾಗಿ ಹೇಳಲು ಇಂಥಾ ಮಹಿಳೆ ಪ್ರಯತ್ನಿಸುತ್ತಾಳೆ. ಸಮಾಜವು ಈವರೆಗೆ ಬಳಸಿದ ಹೋಲಿಕೆಗಳಿಗೆ ತನಗೆ ಉಪಯುಕ್ತವೂ ಸಮಂಜಸವೂ ಎನಿಸುವ ಹೊಸ ಆಯಾಮಗಳನ್ನು ಕಲ್ಪಿಸಲು ಈ ಮಹಿಳೆ ತೊಡಗುತ್ತಾಳೆ.

ಈ ಬಗೆಯ ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಭಾಷೆಯೂ ಹೊಸ ಸಂವಹನಾ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ. ಹಾಗಾಗಿ, ಸಮಾಜದ ಹೆಣ್ಣು ಗಂಡುಗಳು ಬಳಸುವ ಭಾಷೆಯು ಆ ಸಾಮಾಜಿಕ ಸಂದರ್ಭಗಳನ್ನು ವಿವರಿಸುವ ಮುಖ್ಯ ಸಾಧನವೂ ಆಗುತ್ತದೆ. ವಿವಿಧ ವರ್ಗ, ಜಾತಿ, ಶಿಕ್ಷಣ ಇತ್ಯಾದಿ ಸಂದರ್ಭಗಳಲ್ಲಿ ಹೆಣ್ಣು ಗಂಡುಗಳ ಭಾಷಾ ಬಳಕೆಯು ವಿಭಿನ್ನವಾಗಿರುತ್ತವೆನ್ನುವುದು ಹೌದಾದರೂ, ವ್ಯಕ್ತಿಯು ಹೆಣ್ಣು ಅಥವಾ ಗಂಡು ಎಂಬುದರಿಂದಾಗಿಯೇ ವ್ಯಕ್ತವಾಗುವ ವಿಶಿಷ್ಟ ಭಾಷಾ ವೈವಿಧ್ಯಗಳೂ ಕಾಣಬರುತ್ತವೆ.

ಸಮಾಜದಲ್ಲಿ ಗಂಡು ಹೆಣ್ಣುಗಳು ಪ್ರತ್ಯೇಕವಾದ ಎರಡು ಸಮುದಾಯಗಳೆನ್ನಬಹುದು. ಜಾತಿ, ವರ್ಗ, ಪ್ರಾದೇಶಿಕತೆ, ಶಿಕ್ಷಣಗಳಂತಹವುಗಳಿಗೆ ಸಂಬಂಧಿಸಿದಂತೆಯೂ ಸಮುದಾಯ ಹಂತಗಳಿವೆ. ಈ ಹಂತಗಳು ಪರಸ್ಪರ ಎಷ್ಟು ಭಿನ್ನ ಎಂಬುದು ಸ್ಪಷ್ಟ ಗೋಚರ. ಅವು ಪ್ರತ್ಯೇಕ ಎಂಬುದರ ಜೊತೆಗೆ ಅವು ಪ್ರತ್ಯೇಕವಾಗಿಯೇ ಬಾಳುವ ಸಾಧ್ಯತೆ ಇದೆ ಮತ್ತು ಹಾಗೆಯೇ ಬಾಳುತ್ತವೆ. ಆದರೆ ಗಂಡು ಹೆಣ್ಣುಗಳೆಂಬ ಸಮುದಾಯಗಳು ಪ್ರತ್ಯೇಕವಾದವು ಎಂಬುದು ಹೌದಾದರೂ ಅವೆರಡೂ ಪ್ರತ್ಯೇಕವಾಗಿ ಬಾಳದೆ ಒಂದೇ ಕಡೆ ಬಾಳಬೇಕಾದ ಸಂದರ್ಭವಿದೆ. ಈ ದೃಷ್ಟಿಯಿಂದ ಇಲ್ಲಿನ ಪ್ರತ್ಯೇಕತೆ ಮತ್ತು ಪೈಪೋಟಿ ವಿಚಿತ್ರ ರೀತಿಯದು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಕೀಳು ಎಂದು ಪರಿಗಣಿಸಲಾಗಿದೆ. ಅಷ್ಟೇ ಅಲ್ಲ. ಅವಳು ನಿರಂತರವಾಗಿ ಅಧೀನಳಾಗಿಯೇ ಉಳಿಯಬೇಕೆಂಬ ಬಗ್ಗೆ ಬಗೆಬಗೆಯ ಹುನ್ನಾರಗಳು ಸತತವಾಗಿ ನಡೆಯುತ್ತಿವೆ. ಜಾಗ್ರತಗೊಂಡಿರುವ ಮಹಿಳೆ ಈಗಿನ ತನ್ನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ತೀವ್ರವಾಗಿ ಹೆಣಗುತ್ತಿದ್ದಾಳೆ. ಪುರುಷ ಪ್ರಧಾನ ಸಮಾಜವು ಹೆಣ್ಣಿನ ಬಗೆಗೆ ತಳೆದಿರುವ ಧೋರಣೆಗಳು ಮತ್ತು ಅವುಗಳನ್ನು ಜಾರಿಗೊಳಿಸಲು ನಡೆಸಿರುವ ಹುನ್ನಾರಗಳನ್ನು ಅರ್ಥಮಾಡಿಕೊಳ್ಳುವಲ್ಲಿ, ಇಂತಹ ಹುನ್ನಾರಗಳು ಭಾಷೆಯ ಬಳಕೆಯ ಸಂದರ್ಭದಲ್ಲಿ ವ್ಯಕ್ತಗೊಂಡಿರುವ ಬಗೆಗಳು ಸೂಚಕಗಳಾಗಿ ನೆರವಾಗುತ್ತವೆ.

ಹೆಣ್ಣಿನ ಬಗೆಗಿನ ಸಮಾಜದ ಅಭಿಪ್ರಾಯಗಳನ್ನು ಭಾಷೆಯು ಗಾದೆಗಳಲ್ಲಿ, ನುಡಿಗಟ್ಟುಗಳಲ್ಲಿ, ಬೈಗುಳಗಳಲ್ಲಿ ಹಿಡಿದಿಟ್ಟಿದೆ. ಇಂಥಾ ಗಾದೆ, ನುಡಿಗಟ್ಟು, ಬೈಗುಳಗಳ ಪಟ್ಟಿ ದೊಡ್ಡದಿದೆ. ಇಲ್ಲೆಲ್ಲಾ ಸಮಾಜವು ಹೆಣ್ಣಿಗೆ ಬುದ್ಧಿ ಸಾಮರ್ಥ್ಯ ತುಂಬಾ ಕಡಿಮೆ, ಅವಳು ತುಂಬಾ ದುರ್ಬಲಳು ಎಂಬಂತಹ ಅವಳ ದೋಷಗಳನ್ನು, ಹಾಗಾಗಿ ಅವಳು ಗಂಡಿನ ಭೋಗ ವಸ್ತುವಾಗಿ ಮಾತ್ರ ಇರಲು ಅರ್ಹಳು ಎಂಬ ನಿರ್ಧಾರಗಳನ್ನೂ ಹೇಳುತ್ತದೆ. ಅಲ್ಲದೆ ತನ್ನ ಈ ನಿರ್ದೇಶನಗಳನ್ನು ಮೀರಿ ಎದುರು ಬಿದ್ದವಳು ನೀಚಳೂ ಸಮಾಜ ವಿರೋಧಿಯೂ ಎನಿಸುತ್ತಾಳೆಂದೂ, ಇವಕ್ಕೆ ತಲೆಬಾಗಿ ನಡೆಯುವವಳಿಗೆ ಮಾತ್ರವೇ ಸಾಮಾಜಿಕ ಮನ್ನಣೆ ದೊರೆಯುತ್ತದೆಂದೂ ಬೆದರಿಕೆಯನ್ನು ಹಾಕುತ್ತದೆ. ಇವೆಲ್ಲವನ್ನೂ ಅಭಿವ್ಯಕ್ತಿಸುವ ಗಾದೆ, ನುಡಿಗಟ್ಟು, ಬೈಗುಳಗಳು ಯಾವ ಪ್ರಮಾಣದ ಅಶ್ಲೀಲತೆಗೂ ಹೇಸದ ಭಾಷಾರೂಪಗಳನ್ನು ಪಡೆಯುತ್ತವೆ.

ಭಾಷೆಯ ಬಳಕೆಯ ವಿಧಾನದಲ್ಲೂ ಸಮಾಜವು ಹೆಣ್ಣು ಗಂಡುಗಳಿಗೆ ನೀಡಿರುವ ನಿರ್ದೇಶನಗಳ ಸ್ಪಷ್ಟ ಕುರುಹುಗಳಿವೆ. ಗಂಡಸಿಗೆ ವಿಶೇಷ ಸವಲತ್ತುಗಳನ್ನೂ, ಹೆಂಗಸಿಗೆ ಅನೇಕ ನಿಬಂಧನೆಗಳನ್ನೂ ಸಮಾಜವು ವಿಧಿಸುತ್ತದೆ. ಉದಾಹರಣೆಗೆ ಏರುಧ್ವನಿ, ಅಶ್ಲೀಲ ವಸ್ತು ಹಾಗೂ ಪದಗಳ ಬಳಕೆ, ಅನುನಯವಿಲ್ಲದ ಮಾತುಗಾರಿಕೆಗಳು ಹೆಣ್ಣಿನ ಭಾಷೆಯ ದೋಷಗಳೆನ್ನಿಸಿದರೆ, ಇವೇ ಗಂಡಿನ ಭಾಷೆಯ ಗುಣಾತ್ಮಕ ಅಂಶಗಳೆನಿಸುತ್ತವೆ.

ಭಾಷೆಯು ಈಗ ಬಳಕೆಯಾಗುತ್ತಿರುವ ಆಕಾರವನ್ನು ಪಡೆಯಲು ಮಾನವ ಚರಿತ್ರೆಯಲ್ಲಿ ಕಾರಣಗಳಿವೆ. ಪುರುಷನು ಮಹಿಳೆಯ ಮೇಲೆ ಸಾಧಿಸಿದ ಆಕ್ರಮಣದ ಕುರುಹುಗಳನ್ನು ಅವನೇ ನಿರ್ಮಿಸಿ ಬಳಕೆಗೆ ತಂದ ಭಾಷೆಯಲ್ಲಿ ಕಾಣುವುದು ಸಾಧ್ಯ. ಪುರುಷನು ಮಹಿಳೆಗೆ ಮಾತನಾಡುವ ಹಕ್ಕನ್ನೇ ನಿರಾಕರಿಸಿದ ಘಟ್ಟವೂ ಇದೆ. ಈಗೀಗಷ್ಟೇ ನಿಧಾನವಾಗಿ ಭಾಷೆಯಲ್ಲಿ ತನ್ನ ಸಂವಹನಾ ಸಾಮರ್ಥ್ಯವನ್ನು ಕಂಡುಕೊಳ್ಳಲು ತೊಡಗಿರುವ ಹೆಣ್ಣಿಗೆ ತನ್ನದೇ ಭಾಷೆಯೊಂದನ್ನು ರೂಪಿಸಿಕೊಳ್ಳಬೇಕಾದ ಅಗತ್ಯ ಇನ್ನೂ ಸಾಧಿತವಾಗಿಲ್ಲ. ಪುರುಷ ನಿರ್ಮಿತ ಭಾಷೆಯನ್ನೇ ತನ್ನದೆಂದು ಭ್ರಮಿಸಿ ಬಳಸತೊಡಗಿ, ತನ್ನೊಳಗಿನದನ್ನು ಸರಿಯಾಗಿ ಸಂವಹನ ಮಾಡಲು ಸಾಧ್ಯವಾಗದೆ ತೊಳಲುತ್ತಿದ್ದಾಳೆ, ಇದರ ಒಂದು ಸೂಚನೆಯನ್ನು ನಮ್ಮ ಮಹಿಳಾ ಸಾಹಿತ್ಯದಲ್ಲಿ ಕಾಣಬಹುದು. ಸಾಹಿತ್ಯದ ಕೆಲವೇ ಪ್ರಕಾರಗಳಿಗೆ ಅವಳ ಸೃಜನ ಸಾಮರ್ಥ್ಯ ಮಿತಿಗೊಂಡಿದೆ, ಕೆಲವು ಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯ ಸಾಧನೆ ಏನೇನೂ ಇಲ್ಲ, ಈ ಮಿತಿಯಾದ ಅವಳ ಪ್ರಯತ್ನವೂ ಗಂಡಸಿನ ಸಾಧನೆಗೆ ಸಮನಾಗಲು ಸಾಧ್ಯವೇ ಇಲ್ಲವೆಂಬಂಥದು ಎಂಬ ಅಭಿಪ್ರಾಯಗಳು ಧಾರಾಕಾರವಾಗಿ ಸುರಿದು ವಿಮರ್ಶೆಗಳು ಬರುತ್ತಿವೆ. ಈಗೀಗ ಈ ಅಭಿಪ್ರಾಯಗಳನ್ನು ವಿಶ್ಲೇಷಿಸುವ ಪ್ರಯತ್ನಗಳು ಮೊದಲಾಗಿವೆ. ಸ್ತ್ರೀ ಹಾಗೂ ಪುರುಷರ ಸಾಹಿತ್ಯಗಳ ಮೌಲ್ಯಮಾಪನಗಳಲ್ಲಿ ಸೂಕ್ತ ಮಾನದಂಡಗಳು

ಬಳಕೆಯಾಗುತ್ತಿಲ್ಲವೆಂಬ ಪ್ರತಿರೋಧವೂ ಬರುತ್ತಿದೆ. ಈ ಪ್ರತಿರೋಧದ ಹಿನ್ನೆಲೆಯಲ್ಲಿ ಸ್ತ್ರೀ ಪುರುಷರ ಸೃಜನಶೀಲ ಅಭಿವ್ಯಕ್ತಿಗಳಿಗೆ ಒದಗಿರುವ ಭಾಷೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕೆಂಬ ಒತ್ತಾಯವೇ ಇದೆ ಎಂಬುದು ಗಮನಾರ್ಹ.

ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಣಾಯಕವಾಗಿಸುವ ಪ್ರಮುಖ ಸಂಗತಿಗಳಿಗೂ ವಿವಾಹವೆಂಬ ಸಂಸ್ಥೆಗೂ ತುಂಬಾ ನಿಕಟವಾದ ಸಂಬಂಧವಿದೆ. ವಿವಾಹವು ಹೆಣ್ಣಿಗೆ ವಿಧಿಸಿರುವಷ್ಟು ನಿಬಂಧನೆಗಳನ್ನೂ, ನಿಷ್ಠುರ ನಿಯಮಗಳನ್ನೂ ಗಂಡಿಗೆ ವಿಧಿಸಿಲ್ಲ. ಅವನಿಗೆ ರಿಯಾಯಿತಿಗಳು ಅಸಂಖ್ಯವಾಗಿ ಲಭ್ಯವಾಗಿವೆಯಾದರೆ ಅವಳಿಗೆ ನಿಷೇಧಗಳನ್ನು ಹೇರಲಾಗಿದೆ. ಸಮಾಜವು ಹೆಣ್ಣು ಗಂಡುಗಳ ವೈವಾಹಿಕ ಸ್ಥಿತಿಯ ಬಗ್ಗೆ ತಾರತಮ್ಯಗಳನ್ನು ತೋರಿರುವ ಅಂಶ ವ್ಯಕ್ತಿಯ ಹೆಸರುಗಳನ್ನು ಹೇಳುವಾಗ ಆಗುವ ಭಾಷೆಯ ಬಳಕೆಯಲ್ಲಿ ಸ್ಪಷ್ಟವಾಗಿ ಸೂಚಿತವಾಗುತ್ತದೆ. ಮದುವೆಯಾದ ಗಂಡಹೆಂಡತಿಯರ ಹೆಸರುಗಳನ್ನು ಹೇಳಬೇಕೆಂದರೆ ಶ್ರೀ ಮತ್ತು ಶ್ರೀಮತಿ ಎಂಬುದರೊಂದಿಗೆ ಗಂಡನ ಹೆಸರು ಹೇಳಿದರೆ ಸಾಕು. ಅವಳ ಹೆಸರನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರತ್ಯೇಕವಾಗಿ ಅವಳ ಹೆಸರನ್ನಷ್ಟೇ ಹೇಳಬೇಕಾದಾಗಲೂ ಅವಳು ಮದುವೆಯಾದವಳೇ ಇಲ್ಲವೇ ಎಂಬುದನ್ನು ಸೂಚಿಸಬೇಕು. ಕುಮಾರಿ/ಶ್ರೀಮತಿ ಇಂಥವರು ಎಂದು. ಇದು ಆಕೆಯ ವೈವಾಹಿಕ ಸ್ಥಿತಿಯನ್ನು ಮಾತ್ರ ಹೇಳುವುದಿಲ್ಲ. ಜೊತೆಗೆ ಟೀಕೆ ಟಿಪ್ಪಣಿಯನ್ನೂ ಸೇರಿಸುತ್ತದೆ. ಉದಾಹರಣೆಗೆ ಮದುವೆಯ ವಯಸ್ಸು ದಾಟಿದವಳಿಗೆ 'ಕುಮಾರಿ' ಎಂದು ಸೇರಿಸಿದಾಗ ನಗೆಪಾಟಲಿನ ವಿಷಯವೆನಿಸುತ್ತದೆ. ಕುಮಾರಿ ಜಯಲಲಿತ ಎಂದಾಗ ಉಕ್ಕುವ ಹಾಸ್ಯ ಕಳಂಕ ಸೂಚಕವಾದದ್ದು. ಆದರೆ ಗಂಡು ಹಾಗೆ ಅವಿವಾಹಿತನಾಗಿ ಉಳಿದುಬಿಟ್ಟಿದ್ದರೆ ಅದು ಕಳಂಕ ಸೂಚಕವೂ ಅಲ್ಲ, ಭಾಷೆಯಲ್ಲಿ ಆ ಸಂಗತಿ ದಾಖಲಾಗುವುದೂ ಇಲ್ಲ.

ಸಮಾಜದಲ್ಲಿ ಗಂಡಸಿಗೆ ಸಮಾನವಾದ ಹಕ್ಕನ್ನು ಪಡೆಯುವಲ್ಲಿ ಹೆಣ್ಣು ಹೊಸ ಎಚ್ಚರವನ್ನು ಪಡೆಯುತ್ತಿದ್ದಾಳೆ ಮತ್ತು ಆ ದಿಸೆಯಲ್ಲಿ ಕಾರ್ಯಪ್ರವೃತ್ತಳಾಗುತ್ತಿದ್ದಾಳೆ ಎಂಬ ಅಂಶವನ್ನು ಭಾಷೆಯಲ್ಲಿ ಹೊಸದಾಗಿ ಚಲಾವಣೆ ಪಡೆದುಕೊಳ್ಳುತ್ತಿರುವ ಪದಕೋಶವು ಸೂಚಿಸುತ್ತದೆ. ಆದರೆ ಈ ಪದಕೋಶವು ಸಮಾಜವು ಪರಿವರ್ತನೆಗೊಳ್ಳುತ್ತಿದೆ ಎಂಬುದರ ಸೂಚನೆಯೆಂದು ಭ್ರಮೆಗೆ ಒಳಗಾಗಬೇಕಾಗಿಲ್ಲ. ಸ್ತ್ರೀವಾದಿ ಚಿಂತನೆಯು ವ್ಯಕ್ತಪಡಿಸಿರುವ ಆಶಯ ಮಾತ್ರ ಎಂದು ಭಾವಿಸಿ ಇದನ್ನು ನೋಡಬೇಕು. ವಾಕ್ಯರಚನೆಯಲ್ಲಿ ಕರ್ತೃಪದದ ಲಿಂಗ ನಿಶ್ಚಿತವಿಲ್ಲದಾಗ ಬಳಸಬೇಕಾದ ಪದ ಸ್ವರೂಪದ ಬಗೆಗೆ ಈ ಚಿಂತನೆಗಳು ಹೊಸ ನಿಲುವುಗಳನ್ನು ತಳೆದಿವೆ ಎಂಬುದರ ಸೂಚಕವಾಗಿ ಈವರೆಗೆ ಚಾಲ್ತಿಯಲ್ಲಿದ್ದ ಕೇವಲ ಪುರುಷಸೂಚಿ ಪದಗಳಿಗೆ ಬದಲು ವ್ಯಕ್ತಿಸೂಚಿ ಪದಗಳು ಚಾಲ್ತಿಗೆ ಬಂದಿವೆ. ಉದಾಹರಣೆಗೆ ಇಂಗ್ಲೀಷಿನ chair person, post carrier ಎಂಬಂಥವು. ಕೆಲವು ವಿಶಿಷ್ಟ ಸಾಮಾಜಿಕ ಸಂದರ್ಭಸೂಚಕಗಳಾಗಿ ಸ್ತ್ರೀ ಚಳುವಳಿ, ಸ್ತ್ರೀ ವಿಮೋಚನೆ, ಸ್ತ್ರೀ ಸಮಾನತೆ, ವಿಧವಾ ವಿವಾಹ ಇತ್ಯಾದಿ ಪದಗಳು ಭಾಷೆಯ ಪದಕೋಶದಲ್ಲಿ ಹೊಸದಾಗಿ ಸ್ಥಾನವನ್ನು ಪಡೆದುಕೊಂಡಿವೆ. ಭಾಷೆಯಲ್ಲಿನ ಈ ಬೆಳವಣಿಗೆಯನ್ನು ಕುರಿತೇ ದೀರ್ಘವಾಗಿ ಪ್ರತ್ಯೇಕ ಅಧ್ಯಯನವನ್ನು ನಡೆಸಬಹುದಾಗಿದೆ.

ಭಾಷಿಕ ರಚನೆಯಲ್ಲೇ ಇರುವ ನಿಯಮಗಳು ಹಾಗೂ ರೂಢಿಗಳು ಹೆಣ್ಣು ಹಾಗೂ ಗಂಡಿನ ಸಂದರ್ಭಗಳಲ್ಲಿ ತೋರುವ ವಿಕಲ್ಪಗಳ ಬಗೆಗಳನ್ನು ಗಮನಿಸಬಹುದು. (ಅ) ಭಾಷೆಯು ಪುರುಷನಿಂದ ನಿರ್ಮಿತವಾಗಿ, ಅವನ ಮೇಲ್ಮೆಯನ್ನು ತೋರುವ ಮತ್ತು ಸ್ತ್ರೀಯನ್ನು ಯಾವುದೇ ಲೆಕ್ಕಕ್ಕೂ ಇಡದಿರುವ ಸೂಚಕವಾಗಿದೆ ಎಂಬುದನ್ನು ಕಾಣಲು ನೆರವಾಗುವ ವಾಕ್ಯರಚನಾ ನಿಯಮವೊಂದನ್ನು ನೋಡಿ :

ಯಾವುದೇ ಸಂದರ್ಭದ ಒಂದು ವಿವರಣೆ : ಪುರುಷನಿಗೆ ಅನ್ವಯವಾಗುವಂತೆ ಮಾತ್ರ ವಾಕ್ಯದಲ್ಲಿರುತ್ತದೆ. ವಿಶೇಷ ಅಗತ್ಯದಲ್ಲಿ ಮಾತ್ರ ವಿವರಣೆಯ ನಂತರದ ವಿಸ್ತರಣೆಯಾಗಿ ಸ್ತ್ರೀಯ ಪ್ರಸ್ತಾಪ ಬರುತ್ತದೆ.

ಉದಾಹರಣೆಗೆ : ಮಾನವ ಪ್ರಗತಿ ಪಥದಲ್ಲಿದ್ದಾನೆ.
ಮಗು ಬೆಳೆಯುತ್ತಾನೆ
ವಿಜ್ಞಾನಿ ಸಂಶೋಧಿಸುತ್ತಾನೆ
ಈಜುಗಾರನ ಸಾಮರ್ಥ್ಯ
ಸಂಗೀತಗಾರನ ಲಹರಿ
ಸಾಹಿತಿಯಾದವನ ನಿಲುವು
ರೋಗಿಷ್ಠನಾದ ವ್ಯಕ್ತಿ.... ಇತ್ಯಾದಿ

ಇಲ್ಲಿನ ಕರ್ತೃಪದಗಳು ಪುರುಷಸೂಚಿಗಳೇ ಎಂಬುದಕ್ಕೆ ಆ ಸಂದರ್ಭಗಳು ಕಾರಣಗಳನ್ನೊದಗಿಸಿಲ್ಲ. ಆದರೆ 'ಪುರುಷನು ಮಾತ್ರವೇ ಗಣನೆಗೆ ಬರುವವನು' ಎಂಬ ಸಾಮಾಜಿಕ ಚಿಂತನೆಗೆ ಈ ನಿಯಮ ದ್ಯೋತಕವಾಗಿದೆಯಷ್ಟೆ. ಆ ಮಹತ್ವದ ಸಭೆಯಲ್ಲಿ

ಮಹಿಳೆಯರೂ ಉಪಸ್ಥಿತರಿದ್ದರು; ಸತ್ತವರ ಪೈಕಿ ಐವರು ಮಹಿಳೆಯರೂ ಸೇರಿದ್ದಾರೆ' ಎಂಬಂತಹ ವಾಕ್ಯಗಳು ವಿವರಣೆಯ ವಿಸ್ತರಣೆಯಾಗಿ ಮಹಿಳೆಯನ್ನು ಒಳಗೊಳ್ಳುತ್ತವೆ.

(ಆ) ಇಂತಿಂಥಾ ವೃತ್ತಿ, ಕಸಬುಗಳಲ್ಲಿ ಹೆಂಗಸರು, ಗಂಡಸರು ಪ್ರವೃತ್ತರಾಗುವುದೇ ಸಹಜ ಎಂಬುದು ಸಮಾಜದಲ್ಲಿ ಗ್ರಹೀತವಾಗಿದೆ. ಭಾಷೆಯಲ್ಲಿ ಆಯಾ ವೃತ್ತಿನಿರತ ವ್ಯಕ್ತಿಯನ್ನು ಸೂಚಿಸುವ ಲಿಂಗಸೂಚಿ ಪದಗಳಿಗೆ ಪರ್ಯಾಯ ಲಿಂಗಸೂಚಿ ಪದಗಳಿಲ್ಲ ಎಂಬುದು ಈ ಗ್ರಹಿಕೆಯ ಸೂಚಕವಾಗಿದೆ. ಉದಾಹರಣೆಗೆ ಡಾಕ್ಟರ್, ಡ್ರೈವರ್, ಪೋಸ್ಟ್‌ಮನ್, ಕಂಡಕ್ಟರ್, ರೈತ, ಅಕ್ಕಸಾಲಿಗ, ವೀರ, ಯೋಧ, ಸೈನಿಕ - ಇಂತಹವು ಯಾವಾಗಲೂ ಪುಲ್ಲಿಂಗ ಸೂಚಿಗಳೇ ಆದರೆ, ಟೀಚರ್, ನರ್ಸ್, ಸೂಳೆ, ದೇವದಾಸಿ ಎಂಬಂತಹವು ಸದಾ ಸ್ತ್ರೀಲಿಂಗಗಳು.

ವೃತ್ತಿ ಕಸಬುಗಳಿಗೆ ಸಂಬಂಧಿಸಿದಂತೆ ಕೆಲವು ಸಾಮಾಜಿಕ ಪರಿವರ್ತನೆಗಳಾಗುತ್ತಿವೆ ಎಂಬುದರ ಸೂಚಕವಾಗಿ ಲೇಡಿ, ವುಮನ್, ಮೇಲ್, ಸ್ತ್ರೀ, ಮಹಿಳಾ ಎಂದು ವಿವರಗಳನ್ನು ಹಚ್ಚಲಾಗುತ್ತಿದೆ. ಅಥವಾ ಮಂತ್ರಿಣಿ, ಅಧ್ಯಕ್ಷೆ, ಸರದಾರಿಣಿ ಎಂಬಂತಹ ಹೊಸ ರೂಪಗಳನ್ನೂ ಸೃಷ್ಟಿಸಲಾಗುತ್ತಿದೆ. ಕೆಲವೊಮ್ಮೆ ಪುರುಷ ಲಿಂಗಸೂಚಕ ಪದಗಳನ್ನು ಇಡಿಯಾಗಿಯೇ ಬದಲಿಸಿ ವ್ಯಕ್ತಿಸೂಚಕ ಪದಗಳನ್ನು ಚಲಾವಣೆಗೆ ತರಲು ಪ್ರಯತ್ನಿಸಲಾಗುತ್ತಿದೆ. Chair personನಂತಹವು. ಇವು ಸಾಮಾಜಿಕ ಪರಿವರ್ತನೆಗಳ ಸೂಚಕಗಳಾಗಿರದೆ, ಸಾಮಾಜಿಕ ಚಿಂತನೆಗಳ ಆಶಯಗಳು ಮಾತ್ರವೇ ಆಗಿವೆ ಎಂಬುದರ ಸೂಚನೆ ಎಂದರೆ ಯಾವ ಭಾಷಿಕ ಸಮುದಾಯಗಳಲ್ಲಿ ಈ ಸಂಬಂಧದ ಚಿಂತನೆಗಳು ತೀವ್ರವಾಗಿ ಪ್ರತಿಪಾದಿತವಾಗುತ್ತಿವೆಯೋ ಆ ಭಾಷೆಗಳಲ್ಲಿ ಇವುಗಳ ನಿದರ್ಶನಗಳು ದೊರಕುತ್ತವೆ. ಬೇರೆ ಭಾಷೆಗಳಲ್ಲಿ ಚಿಂತನೆಗಳು ಪ್ರವೇಶ ಪಡೆದಂತೆ ನಿದರ್ಶನಗಳು ದೊರಕಲಾರಂಭವಾಗಬಹುದು.

(ಇ) ಪರಸ್ಪರ ಸಂಬೋಧನೆಗಳಲ್ಲಿ, ಹಾಗೂ ಸ್ತ್ರೀ ಅಥವಾ ಪುರುಷರ ಬಗೆಗಿನ ಮಾತುಗಳಲ್ಲಿ 'ವಚನ' ಪ್ರಯೋಗವನ್ನು ಗಮನಿಸಿ. ಪುರುಷನು ತನ್ನ ಹೆಂಡತಿ, ತಾಯಿ, ಸೊಸೆ, ಮಗಳು - ಯಾರನ್ನೇ ಆದರೂ ವಯಸ್ಸಿನ ಅಂತರದ ಪರಿವೆಗೆ ಒಳಗಾಗದೆ ಏಕವಚನದಲ್ಲಿ ಸಂಬೋಧಿಸಬಹುದು. ಆದರೆ ಮಹಿಳೆ ಮಾತ್ರ ಗಂಡ, ತಂದೆ, ಮಾವ, ಅಳಿಯ - ಎಲ್ಲರನ್ನೂ ವಯಸ್ಸಿನ ಕಾರಣವಲ್ಲದೆಯೂ ಬಹುವಚನದಲ್ಲೇ ಸಂಬೋಧಿಸುತ್ತಾಳೆ. 'ನನ್ನ ಹೆಂಡತಿ' ಎಂದು ಪುರುಷನು ಹೇಳುವಷ್ಟು ನಿರಾಳವಾಗಿ ಹೆಂಗಸು 'ನನ್ನ ಗಂಡ' ಎಂದು ಹೇಳಿದರೆ ಅದು ಅಸಹಜ, ಅಸಾಧು ಎನಿಸಿಬಿಡುತ್ತದೆ. ಆಕೆ 'ನಮ್ಮ ಯಜಮಾನರು' ಎನ್ನಬೇಕು. ಗಂಡಸು ಹೀಗೊಮ್ಮೆ 'ನಮ್ಮ ಯಜಮಾನತಿ' ಎಂದರೂ ಅದು ಹಾಸ್ಯ ಅಥವಾ ಲಘುವಾದ ಸಂದರ್ಭಗಳಿಗೆ ಮಾತ್ರ ಅನ್ವಯವಾಗುವಂಥದು.

(ಈ) ಲಿಂಗ ಸೂಚಕ ಪದಗಳಲ್ಲಿ ಮೊದಲಿಗೆ ಪುಲ್ಲಿಂಗ ಸೂಚಕವು ಸೃಷ್ಟಿಯಾಗುತ್ತದೆ. ಆ ನಂತರದಲ್ಲಿ ಆ ಪದಕ್ಕೆ ಧ್ವನಿಯೊಂದನ್ನು ಹಚ್ಚುವ ಮೂಲಕ ಅದರ ಸ್ತ್ರೀಲಿಂಗ ರೂಪವನ್ನು ಪಡೆಯಲಾಗುತ್ತದೆ ಎಂದು ಭಾಷಾಶಾಸ್ತ್ರಜ್ಞರು ತಮ್ಮ ಕೆಲವು ಅಧ್ಯಯನಗಳಿಂದ ತೀರ್ಮಾನಿಸಿದ್ದರು. ಬಹುತೇಕ ಭಾಷೆಗಳಿಗೆ ಅನ್ವಯಿಸಿ ಈ ಮಾತು ನಿಜವಾದರೂ ಪ್ರಪಂಚದ ಎಷ್ಟೋ ಭಾಷೆಗಳಿಗೆ ಇದು ಹೊಂದಿಕೆಯಾಗುವುದಿಲ್ಲವೆಂಬ ಕಾರಣಕ್ಕಾಗಿ ಈ ಸಂಶೋಧನಾ ತೀರ್ಮಾನವನ್ನು ವಿವಾದಾಸ್ಪದವೆಂದು ಪರಿಗಣಿಸುತ್ತಾರೆ. ಆದರೂ ಕನ್ನಡಕ್ಕೆ ಇದು ಬಹುಮಟ್ಟಿಗೆ ಅನ್ವಯವಾಗುತ್ತದೆಂಬುದನ್ನು ಹಲವು ಉದಾಹರಣೆಗಳಲ್ಲಿ ನೋಡಬಹುದು. ಓಟಗಾರ-ಓಟಗಾರ್ತಿ, ಹಾಡುಗಾರ-ಹಾಡುಗಾರ್ತಿ, ಹೂವಾಡಿಗ-ಹೂವಾಡಿಗಿತ್ತಿ, ಗಟ್ಟಿಗ-ಗಟ್ಟಿಗಿತ್ತಿ ಇತ್ಯಾದಿ.

ಮೇಲಿನ ಕೆಲವು ಮಾದರಿಗಳು ಭಾಷೆಯ ಬಳಕೆಯ ಸಂದರ್ಭದಲ್ಲಿ ಸಮಾಜವು ವ್ಯಕ್ತಗೊಳಿಸುವ ಸ್ತ್ರೀಪುರುಷರ ಬಗೆಗಿನ ಪರ ವಿರೋಧ ದೃಷ್ಟಿಕೋನಗಳ ಮತ್ತು ಅಭಿಪ್ರಾಯಗಳ ಸೂಚಕಗಳಾಗಿವೆ. ಇನ್ನು ಮುಂದೆ ಸಮಾಜದ ಈ ದೃಷ್ಟಿಕೋನ ಹಾಗೂ ಅಭಿಪ್ರಾಯಗಳನ್ನು ಆ ಸಮಾಜದ ಸ್ತ್ರೀ ಪುರುಷರು ಒಪ್ಪಿರುವ, ವಿರೋಧಿಸಿರುವ, ನಿರಾಕರಿಸಿರುವ ಅಂಶಗಳಿಗೆ ಸೂಚನೆಗಳು ಭಾಷೆಯಲ್ಲಿ ದೊರಕಬಹುದೇ ಎಂಬುದಕ್ಕೆ ಕೆಲವು ಮಾದರಿಗಳನ್ನು ಅಧ್ಯಯನ ಮಾಡಬಹುದು. ಇದಕ್ಕಾಗಿ ಸ್ತ್ರೀ ಪುರುಷರು ಭಾಷೆಯ ಬಳಕೆಯಲ್ಲಿ ಪದಕೋಶದ ಆಯ್ಕೆ, ವಾಕ್ಯರಚನಾ ವಿಧಾನ ಮುಂತಾದವನ್ನು ನಿರ್ವಹಿಸುವ ಬಗೆಯನ್ನು ಪರಿಶೀಲಿಸಬಹುದು. ಅಲ್ಲದೆ ಅವರ ಧ್ವನಿಯ ಏರಿಳಿತ, ಸಂಭಾಷಣೆಯ ಅಂಗವಾಗಿ ತೋರುವ ಹಾವಭಾವಗಳು ಇವುಗಳು ಕೂಡ ಪೂರಕ ಸೂಚನೆಗಳನ್ನು ನೀಡಬಲ್ಲವು. ಈ ಅಧ್ಯಯನವು ನಮ್ಮ ಸಮಾಜವು ಹೆಣ್ಣನ್ನು ತಾನು ಕೀಳಾಗಿ ಕಾಣುವುದಷ್ಟೇ ಅಲ್ಲದೆ ಸ್ವತಃ ಅವಳೂ ಕೂಡ ಕೀಳರಿಮೆಗೆ ಪಕ್ಕಾಗುವಂತೆ ಮಾಡಿಟ್ಟಿದೆ ಎಂಬುದನ್ನು ತೋರಿಸುತ್ತದೆ. ತಮ್ಮ ಮಾತುಕತೆಗಳಲ್ಲಿ ಸ್ತ್ರೀ ಪುರುಷರು ಮಾಡುವ ಪದಗಳ ಆಯ್ಕೆ, ಸಂಭಾಷಣೆಯ ವಿಧಾನ, ವಸ್ತುವಿನ ಆಯ್ಕೆ, ವಾಕ್ಯರಚನಾ ವಿಧಾನವೇ ಮೊದಲಾಗಿ ಎಲ್ಲ ವಿವರಗಳಲ್ಲೂ ಈ ಸಂಗತಿ ಸ್ಪಷ್ಟಗೊಳ್ಳುತ್ತದೆ.

ಸಂಭಾಷಣೆಯು ಹೆಣ್ಣು-ಗಂಡು, ಗಂಡು-ಗಂಡು, ಅಥವಾ ಹೆಣ್ಣು-ಗಂಡುಗಳಲ್ಲಿ ನಡೆಯುವಾಗ ಬೇರೆ ಬೇರೆ ಸ್ವಭಾವಗಳನ್ನೇ ತೋರುತ್ತದೆ. ವ್ಯಕ್ತಿ-ವ್ಯಕ್ತಿಗಳಲ್ಲಿ ಅಥವಾ ಸಮೂಹಗಳಲ್ಲಿ ನಡೆಯುವ ಸಂಭಾಷಣೆಗಳೂ ವಿಶಿಷ್ಟ ಲಕ್ಷಣಗಳನ್ನು ಪಡೆಯುತ್ತವೆ. ಈ ಅಧ್ಯಯನವನ್ನು ಜಾತಿ, ವರ್ಗ, ಶಿಕ್ಷಣ ಮುಂತಾದವುಗಳಿಗೆ ಅನ್ವಯಿಸಿಯೂ ನಡೆಸಬಹುದು. ಇಲ್ಲಿ ಸ್ತ್ರೀ-ಪುರುಷ ತಾರತಮ್ಯಗಳಿಗೆ ಅನ್ವಯಿಸಿ ಕೆಲವು ನಿದರ್ಶನಗಳನ್ನು ಗಮನಿಸೋಣ.

(1) ಮಾತು ಮಾತಿನ ಮುಂದುವರಿಕೆ : ಮಾತು ಪರಸ್ಪರರಲ್ಲಿ ಹೇಗೆ ಬೆಳವಣಿಗೆಯನ್ನು ಪಡೆಯುತ್ತದೆನ್ನುವುದು ಆ ಮಾತಿನಲ್ಲಿ ತೊಡಗಿರುವವರು ಪರಸ್ಪರ ಸ್ಪಂದಿಸುವ ವಿಧಾನವನ್ನು ಅವಲಂಬಿಸಿರುತ್ತದೆ. ಸಂವಹನವೇ ಮುಖ್ಯವಾದಾಗ ಈ ಸ್ಪಂದನವು ಸಹಜವಾಗಿಯೂ ಸುಲಲಿತವಾಗಿಯೂ ಇರುತ್ತದೆ. ಇಲ್ಲಿನ ಯಾರೂ ಕೂಡ ತನ್ನದು ಮೇಲುಗೈಯಾಗಬೇಕು, ತನ್ನ ನಿಯಂತ್ರಣದಲ್ಲಿರಬೇಕು ಎಂಬ ಪ್ರಯತ್ನ ಆ ಮಾತುಕತೆಯಲ್ಲಿ ಮಾಡುತ್ತಿರುವುದಿಲ್ಲ, ಬದಲಿಗೆ ಮಾತಿನ ಮಧ್ಯೆ ಬಾಯಿ ಹಾಕುವುದು, ತನ್ನಿಚ್ಛೆಯಂತೆ ಮಾತು ಬೆಳೆಯಬೇಕೆಂದು ಹವಣಿಸುವುದು, ಎದುರಿನವರ ಮಾತಿಗೆ ತಡೆ ಹಾಕುವುದು, ಅವರ ಮಾತು ನಿರುಪಯುಕ್ತ ಎಂದು ಸೂಚಿಸಲು ಊಗುಡುವುದನ್ನೂ ನಿಲ್ಲಿಸಿಬಿಡುವುದು - ಇಂತಹ ವರ್ತನೆಗಳು ಮೇಲುಗೈ ಸಾಧನೆ, ಹಾಗೂ ನಿಯಂತ್ರಣದ ಸಾಧನೆಯ ಸೂಚಕಗಳು. ಸೂಕ್ತವಾಗಿ ಊಗುಡುವುದು, ಪೂರಕವಾಗಿ ಮಾತನ್ನು ಅಲ್ಲಿ ಇಲ್ಲಿ ಬೆರೆಸುವುದು - ಇಂಥವು ಸಂಭಾಷಣೆಯು ಸಹಜವಾಗಿ ಮುಂದುವರೆಯಲು ನೆರವಾಗುವ ವರ್ತನೆಗಳು.

ಹೆಣ್ಣು-ಹೆಣ್ಣುಗಳ ಸಂಭಾಷಣೆಯಲ್ಲಿ ಸಂಭಾಷಣೆಯ ಸಹಜ ನಿಯಮವು ಜಾರಿಯಲ್ಲಿರುತ್ತದಾದರೆ, ಗಂಡು-ಗಂಡುಗಳ ಸಂಭಾಷಣೆಯಲ್ಲಿ ಕೂಡ, ಇತರ ಸಂಗತಿಗಳ ಸಮಾನತೆಯನ್ನವಲಂಬಿಸಿ, ಹೆಚ್ಚೂ ಕಡಿಮೆ ಈ ನಿಯಮದ ಪಾಲನೆ ನಡೆಯುತ್ತದೆ. ಆದರೆ ಹೆಣ್ಣು-ಗಂಡುಗಳ ಸಂಭಾಷಣೆಯಲ್ಲಿ ಮಾತ್ರ ಗಂಡು ಮಾತಿನ ನಡುವೆ ತಡೆಗಳನ್ನೊಡ್ಡುತ್ತಲೇ ಇರುತ್ತಾನೆ. ಈ ಮೂಲಕ ಮಾತನಾಡುವ ಅವಳ ಹಕ್ಕನ್ನು, ಕೊನೆಗೆ ಹೇಳಿಹೊರಟ ಮಾತನ್ನು ಮುಗಿಸುವ ಹಕ್ಕನ್ನು ಮೊಟಕುಗೊಳಿಸುವ ಹುನ್ನಾರವನ್ನು ನಡೆಸುತ್ತಾನೆ. ಅಥವಾ ಅವಳು ಮಾತನಾಡುತ್ತಲೇ ಇದ್ದರೂ ಅವಳ ಮಾತು ಕೇವಲ ನಿರುಪಯುಕ್ತ ಎಂಬುದನ್ನು ಸೂಚಿಸುವಂತೆ ಸಂಭಾಷಣೆಯ ಸಹಜ ನಿಯಮವಾದ ಊಗುಡುವಿಕೆಯನ್ನು ನಿಲ್ಲಿಸಿಬಿಡುತ್ತಾನೆ. ಎತ್ತಲೋ ನೋಡುತ್ತಾ ನಿರ್ಲಕ್ಷ್ಯದಲ್ಲಿ ಪೇಪರನ್ನು ಮುಖಕ್ಕೆ ಹಿಡಿದೋ ಅಥವಾ ಇನ್ನೆಂಥದೋ ಅರ್ಥಹೀನ ಕೆಲಸದ ಕಡೆ ಗಮನ ಹರಿಸಿಯೋ ಅವಳು ಮಾತನಾಡುವಷ್ಟು ಹೊತ್ತೂ ತಿರುಗಿದ್ದು, ನಂತರ ನಿಧಾನವಾಗಿ 'ಮುಗಿಯಿತೋ' ಎಂಬ ವ್ಯಂಗ್ಯವನ್ನೂ ಸೂಚಿಸಬಹುದು. ಇದೆಲ್ಲವನ್ನೂ ಅವಳ ಬಾಯಿ ಮುಚ್ಚಿಸುವ ಹುನ್ನಾರಗಳೇ. ಆದರೆ ಹೆಣ್ಣು ಮಾತ್ರ ಇದರ ತದ್ವಿರುದ್ಧವಾಗಿ ನಡೆದುಕೊಳ್ಳಬೇಕೆಂದು ನಿರೀಕ್ಷಿಸಲಾಗುತ್ತದೆ. ಬೇಕಾದ, ಬೇಡದ ಯಾವುದೇ ಮಾತನ್ನು ಅವನು ಆಡುತ್ತಿದ್ದರೂ ಗಮನವಿಟ್ಟು ಕೇಳಬೇಕು. ಮಧ್ಯೆ ಬಾಯಿ ಹಾಕಲು ಪ್ರಯತ್ನಿಸದೆ ಹೂಂಗುಡುತ್ತಾ ಅವನ ಮಾತು ನಿರಂತರವಾಗಿ ಸಾಗಲು ನೆರವಾಗಬೇಕು. ಇನ್ನೂ ಮುಂದುವರೆದು ಮೂರ್ಖತನದ ಪ್ರಶ್ನೆಗಳನ್ನೂ, ಅದೇ ಮುಖಭಾವವನ್ನು ಪ್ರದರ್ಶಿಸುತ್ತಾ ಇದ್ದರೆ ಇನ್ನೂ ಒಳ್ಳೆಯದು.

(2) ಗಂಡು, ಹೆಣ್ಣುಗಳು ತಮ್ಮ ಮಾತುಕತೆಗಳಿಗೆ ಆಯ್ಕೆ ಮಾಡುವ ವಿಷಯಗಳನ್ನೇ ಮಹತ್ವ, ಉಪಯುಕ್ತ ಅಥವಾ ಅಮುಖ್ಯ, ನಿರುಪಯುಕ್ತ ಎಂದು ವಿಂಗಡಿಸಿಬಿಡಲಾಗಿದೆ. ಹೆಂಗಸರು ಆಯ್ದುಕೊಳ್ಳುವ ಅಡಿಗೆ, ಮನೆ, ಮಕ್ಕಳು, ಸಂಬಂಧಗಳು - ಎಂಬಂತಹ ಸಂಗತಿಗಳಿಂದಾಗಿ ಅವರ ಸಂಭಾಷಣೆಗಳು ನಿರುಪಯುಕ್ತ ಹರಟೆಗಳೆಂಬ ಹಣೆಪಟ್ಟಿಯನ್ನು ಕಟ್ಟಿಕೊಳ್ಳುತ್ತವೆ. ಇವೆಲ್ಲವೂ ಜೀವನದ ಅತ್ಯಗತ್ಯ ವಿಷಯಗಳೇ ಹೌದಾದರು ಮಾತುಕತೆಯ ವಸ್ತುಗಳಾಗಿಬಿಟ್ಟರೆ ವ್ಯಂಗ್ಯ ವಿಡಂಬನೆಗಳಿಗೆ ಪಕ್ಕಾಗಿಬಿಡುತ್ತವೆ. ಆದರೆ ಪುರುಷರು ರಾಜಕೀಯ, ಕ್ರೀಡೆಗಳು, ವ್ಯಾಪಾರ ವ್ಯವಹಾರ - ಇತ್ಯಾದಿಗಳನ್ನು ಕುರಿತು ನಡೆಸುವ ಮಾತುಕತೆಗಳು ಗಂಭೀರ ಹಾಗೂ ಉಪಯುಕ್ತ ಚಟುವಟಿಕೆಗಳೆನಿಸುತ್ತವೆ. ಇವುಗಳಲ್ಲಿ ನೇರವಾಗಿ ಜೀವನಕ್ಕೆ ಉಪಯುಕ್ತವಾಗದೆ ಹೋಗುವ ಸಂಗತಿಗಳು ಎಷ್ಟೋ ಸೇರಿದ್ದರೂ ಅವು ಪುರುಷನ ಸಾಮರ್ಥ್ಯದ ದ್ಯೋತಕಗಳೆನಿಸಿ ಮನ್ನಣೆಯನ್ನು ಗಳಿಸುತ್ತವೆ.

ಈಚೆಗಿನ ಚಿಂತನೆಗಳ ಫಲವಾಗಿ ಮಹಿಳೆಯು ಸಮಾನತೆಯನ್ನು ಸಾಧಿಸಲು ಯತ್ನಿಸುತ್ತಾ, ಗಂಡನ್ನು ಅನುಕರಿಸಲು ಹೊರಟು, ಅವನ ಆಯ್ಕೆಯ ವಿಷಯಗಳನ್ನೇ ತನ್ನದೆಂದು ಭ್ರಮಿಸಿದಾಗ ಗೊಂದಲಗಳಿಗೆ ಒಳಗಾಗಿ ಸೂಕ್ತ ಸಂವಹನಾ ಸಾಮರ್ಥ್ಯವನ್ನೇ ದಕ್ಕಿಸಿಕೊಳ್ಳಲಾಗದೆ ತೊಳಲುವುದನ್ನು ಗಮನಿಸಿದಾಗ ಸಮಸ್ಯೆಯ ಮೂಲವೆಲ್ಲಿದೆ ಎಂಬುದನ್ನು ಗ್ರಹಿಸಲು ವಿಫಲರಾದ ಇಂಥಾ ಮಹಿಳೆಯರ ಸ್ಥಿತಿ ಅರ್ಥವಾಗುತ್ತದೆ.

(3) ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಅವಕಾಶಗಳಿಲ್ಲ ಎಂಬ ಸಾಮಾಜಿಕ ನಿರ್ದೇಶನ ಅಲ್ಲಿನ ಭಾಷೆಯಲ್ಲಿ ಆಕಾರ ತಳೆದಿರುತ್ತದೆ. ಹೆಣ್ಣಿನ ಮಾತಿನ ಧಾಟಿಯನ್ನು, ಗಂಡಿನ ಮಾತಿನ ಧಾಟಿಯನ್ನು ಗಮನಿಸಿ. ಉದಾಹರಣೆಗೆ ಹೆಂಗಸರು ಹೇಳಿಕೆಯೊಂದನ್ನು ನೀಡಿದ ಮೇಲೆ, ಅದರ ಹಿಂದೆಯೇ ಅಲ್ಲವಾ, ಹೌದಲ್ಲವಾ ಎಂಬ ಪ್ರಶ್ನೆಗಳನ್ನು ಸೇರಿಸುತ್ತಾರೆ. ತಮ್ಮ ಹೇಳಿಕೆಯ ಸಮರ್ಥನೆಯನ್ನು ಎದುರಿನವರ ಮಾತಿನಲ್ಲಿ ನಿರೀಕ್ಷಿಸುತ್ತಾರೆ. ಹಾಗೆಯೇ ಅದೇ ಮತ್ತೆ, ನಾನೂ ಹಾಗೆಯೇ ಅಂದುಕೊಂಡಿದ್ದೆ ಎಂಬಂತಹ ಪ್ರತಿಕ್ರಿಯೆಗಳಲ್ಲಿ ಹಿಂಜರಿಕೆಯೇ ಪ್ರಧಾನವಾದ ಮಂಡನೆಯನ್ನು ಗುರುತಿಸಬಹುದು. ಈ ಮಾದರಿಗಳು ಗಂಡಸಿನ ಮಾತಿನಲ್ಲಿ ಬಂದರೆ ಅವು ಅನಿಶ್ಚಿತತೆಯ ಸಂದರ್ಭಗಳಲ್ಲಿ ಮಾತ್ರ ಬರುತ್ತವೆ. ಸಮರ್ಥನೆಯನ್ನು ನಿರೀಕ್ಷಿಸುವ ಅಥವಾ ಹಿಂಜರಿಕೆಯ ಕಾರಣಗಳು ಅಲ್ಲಿ ಇರುವುದಿಲ್ಲ.

(4) ನಿರ್ದೇಶಕ/ಆದೇಶಕಗಳನ್ನು ಬಳಸುವಾಗ ಹೆಣ್ಣಿನ ಭಾಷೆಯಲ್ಲಿ 'ಹೀಗೆ ಮಾಡಿದ್ದರೆ ಆಗುತ್ತಿತ್ತು', 'ಹಾಗೆ ಮಾಡಿದರೆ ಸರಿಯಾಗದೇ' ಎಂಬ ರೀತಿಯ ಅನುನಯ ಕಂಡುಬರುತ್ತದೆ. ಆದರೆ ಗಂಡಿನ ಭಾಷೆಯಲ್ಲಿ ಇದು ಖಡಾಖಂಡಿತವಾಗಿ ವ್ಯಕ್ತವಾಗುತ್ತದೆ.

ಈ ಮಾತುಗಳು ಆಯಾ ಗಂಡು ಹೆಣ್ಣುಗಳು ಸ್ವಭಾವದಿಂದ ಅನುನಯ ಪರರೋ, ಸಂಕೋಚ ದಾಕ್ಷಿಣ್ಯ ಪರರೋ ಎಂಬುದನ್ನೇನೂ ಹೇಳುತ್ತವೆಂದಲ್ಲ. ಆದರೆ ಅವರು ಬಳಸುವ ಭಾಷೆಯಲ್ಲಿ ಸಮಾಜವು ಅವರು ಹೀಗಿರಬೇಕು ಎಂದು ನಿರೀಕ್ಷಿಸುತ್ತದೆ ಎಂಬುದು ವ್ಯಕ್ತವಾಗುತ್ತದೆ. ಹಾಸ್ಯ ಪ್ರಸಂಗಗಳನ್ನು ಸೃಷ್ಟಿಸುವಾಗಿನ ಸಂಭಾಷಣೆಗಳಲ್ಲಿ ಇದು ಚೆನ್ನಾಗಿ ನಿರೂಪಿತವಾಗುತ್ತದೆ. ಗಯ್ಯಾಳಿ ಎನಿಸಿದ ಹೆಂಡತಿಯು ಗಂಡನನ್ನು ಏನ್ರಿ, ಬನ್ರಿ ಎನ್ನುತ್ತಲೇ ದಬಾಯಿಸುವುದನ್ನೂ, ಅವನು ಹೋಗೇ, ಬಾರೇ ಎನ್ನುತ್ತಲೇ ದೈನ್ಯಾವಸ್ಥೆಗೆ ಇಳಿಯುವುದನ್ನೂ ಚಿತ್ರಿಸಲಾಗುತ್ತದೆ.

ಸಮಾಜದ ನಿರೀಕ್ಷೆಯು ವ್ಯಕ್ತವಾಗುವ ಭಾಷೆಯ ಈ ಗುಣವನ್ನೇ ಪರಿಗಣಿಸಿ 'ಹೆಣ್ಣಿನ ಭಾಷೆ' ಹಾಗೂ 'ಗಂಡಿನ ಭಾಷೆ' ಎಂದು ವಿಶೇಷಣವನ್ನು ಹಚ್ಚಲಾಗುವುದು. ಹೆಣ್ಣು 'ಗಂಡಿನ ಭಾಷೆ'ಯನ್ನೂ, ಗಂಡು 'ಹೆಣ್ಣಿನ ಭಾಷೆ'ಯನ್ನೂ ಬಳಸಬಾರದು. ಪದಗಳ ಆಯ್ಕೆ, ವಾಕ್ಯರಚನಾ ವಿಧಾನ, ಧ್ವನಿಯ ಏರಿಳಿತ, ವಿಷಯದ ಆಯ್ಕೆ - ಹೀಗೆ ಪ್ರತಿಯೊಂದರಲ್ಲೂ 'ಗಂಡಿನ ಭಾಷೆ'ಯ ಗುಣ ಮತ್ತು 'ಹೆಣ್ಣಿನ ಭಾಷೆ'ಯ ಗುಣ ಪ್ರತ್ಯೇಕದ್ದಾಗಿರುತ್ತದೆ. ಮಾತು ಕಲಿಯಲು ತೊಡಗಿದ ಹಂತದಿಂದಲೇ ಮಗುವಿಗೆ ಈ ಬಗ್ಗೆ ಸೂಕ್ತ ತರಬೇತಿ ದೊರೆಯಲಾರಂಭವಾಗುತ್ತದೆ. ಮನೆಯಲ್ಲಿ ತಂದೆ, ತಾಯಿ ಮೊದಲಾದ ಸದಸ್ಯರಿಂದ ಮೊದಲಾಗಿ, ಮುಂದೆ ಮಗು ಬೆಳೆದಂತೆ ತೆರೆದುಕೊಳ್ಳುವ ಅಕ್ಕಪಕ್ಕದವರಿರಬಹುದು, ಶಾಲೆ ಇರಬಹುದು, ಸಂಪರ್ಕಕ್ಕೆ ಬರುವ ಇನ್ಯಾರೇ ಇರಬಹುದು - ಅವ್ಯಾಹತವಾಗಿ ಈ ತರಬೇತಿ ಜಾರಿಯಲ್ಲಿರುತ್ತದೆ. ಗಂಡು, ಹೆಣ್ಣು ಮಕ್ಕಳು ಬುದ್ಧಿ ತಿಳಿಯುವ ಮೊದಲೇ ತಮ್ಮ ಭಾಷೆಯ ಸಾಂಸ್ಕೃತಿಕ, ಸಾಮಾಜಿಕ ದಿಗ್ಬಂಧನದೊಳಗೆ ಸಿಲುಕಿ ಹೋಗುತ್ತಾರೆ. ಆಟಪಾಟಗಳಲ್ಲೇ ತಮ್ಮ ಅಪ್ಪ ಅಮ್ಮಂದಿರು ಪರಸ್ಪರ ಬಳಸುವ ಭಾಷೆಯನ್ನು ಅನುಕರಿಸುತ್ತಾ ತಮ್ಮ ಮಾದರಿಗಳನ್ನು ಕಂಡುಕೊಳ್ಳುತ್ತಾರೆ. ಭಾಷೆಯನ್ನು ಕಲಿಯುತ್ತಲೇ ಮಗುವು ತನ್ನ ಸಂಸ್ಕೃತಿಯಲ್ಲಿ ಹೆಣ್ಣಾಗಿ, ಗಂಡಾಗಿ ತನಗೆ ದೊರೆತಿರುವ ಪಾತ್ರವೇನು ಎಂಬುದನ್ನೂ ಕಲಿಯುತ್ತದೆ. ಲಿಂಗಭೇದಾನುಸಾರವಾಗಿ ಭಾಷೆಯಲ್ಲಿ ತೋರಿಬರುವ ವಿಕಲ್ಪಗಳು ವಿನಾಕಾರಣದ ಸೃಷ್ಟಿಗಳಲ್ಲ. ಸಾಮಾಜಿಕ ವಿಕಲ್ಪಗಳ ಹುಟ್ಟಿನೊಂದಿಗೆ ಅತ್ಯಂತ ಸಂಕೀರ್ಣ ರೀತಿಯಲ್ಲಿ ವರ್ತಿಸುತ್ತಾ ಭಾಷಾ ವಿಕಲ್ಪಗಳೂ ಸೃಷ್ಟಿಯಾಗುತ್ತವೆ. ಭಾಷೆಯ ವಿಕಲ್ಪಗಳು ಸಮಾಜದ ವಿಕಲ್ಪಗಳ ಸ್ಪಷ್ಟ ಸೂಚಕಗಳು. ಹೆಣ್ಣಿನ ಭಾಷೆ, ಗಂಡಿನ ಭಾಷೆ ಎಂಬ ವಿಕಲ್ಪಗಳಿವೆ ಎಂದರೆ, ಅದು ಆ ಸಮಾಜದಲ್ಲಿ ಗಂಡು, ಹೆಣ್ಣುಗಳಿಗಿರುವ ಪಾತ್ರಗಳ ವಿಕಲ್ಪಗಳ ಸೂಚನೆಯೇ ಆಗಿರುತ್ತದೆ.

- ಎಚ್. ಎಸ್. ಶ್ರೀಮತಿ

'ಸಮಾನತೆ'

ಎಲ್ಲರಿಗೂ ಇದೆ ಸಮಾನತೆ
ಸಂವಿಧಾನದಲಿ ಇದೆ ಮಾನ್ಯತೆ
ಆದರೆಲ್ಲಿದೆ?
ಹುಡುಕಬೇಕು 'ಸಾ' ಮಾನವತೆ

- ಕಲ್ಪನಾ ಭಟ್

ಕೇಟ್ ಚಾಪಿನ್‌ಳ 'ದಿ ಅವೇಕನಿಂಗ್'

ಇದು ಈಕೆಯ ಪುಟ್ಟ ಹಾಗೂ ಕೊನೆಯ ಕಾದಂಬರಿ. ಗಾತ್ರದಲ್ಲಿ ನೂರೈವತ್ತು ಪುಟವಿರುವ ಈ ಕಾದಂಬರಿ ಬರೆಯಲ್ಪಟ್ಟಿದ್ದು 1899ರಲ್ಲಿ. 19ನೇ ಶತಮಾನದ ಈ ಕಾದಂಬರಿ ಚಾರಿತ್ರಿಕವಾಗಿ ಹಾಗೂ ಮಹಿಳಾ ಪ್ರಶ್ನೆಯ ದೆಸೆಯಿಂದಾಗಿ ಈಗಲೂ ನಮಗೆ ಮುಖ್ಯ ಅನಿಸುತ್ತದೆ. ಮಹಿಳಾ ಚಳುವಳಿಯ ಧ್ವನಿ ಕೇಳಿಬಂದಿರದ ಸಂದರ್ಭದಲ್ಲಿ 'ದಿ ಅವೇಕನಿಂಗ್' ಕಾದಂಬರಿ ಹೆಣ್ಣಿನ ಲೈಂಗಿಕತೆ, ಸ್ವಂತ ವ್ಯಕ್ತಿತ್ವದ ಕಲ್ಪನೆ, ಆರ್ಥಿಕ ಸ್ವಾತಂತ್ರ್ಯದ ಅಗತ್ಯ, ಸ್ವಂತಿಕೆಯ ಶೋಧನೆಯನ್ನು ಕುರಿತು ಮಾತನಾಡುತ್ತದೆ. ಈ ಕಾದಂಬರಿ ಪ್ರಕಟವಾದಾಗ ಅಮೇರಿಕಾದಲ್ಲಿ ಈ ಬಗ್ಗೆ ಕಟುವಾದ ಟೀಕೆಗಳು ಪ್ರಕಟಗೊಂಡವು. ಕಾದಂಬರಿ ಅಶ್ಲೀಲವಾಗಿದೆ ಎಂಬುದರ ಜೊತೆಗೆ ಅನೈತಿಕತೆಗಳನ್ನು ಎತ್ತಿ ಹಿಡಿಯುತ್ತವೆ ಎಂಬ ಟೀಕೆಗಳು ತೀವ್ರತರನಾದಾಗ ಕೇಟ್ ಚಾಪಿನ್ ನೊಂದುಕೊಂಡಿದ್ದಳು. ಈಕೆಯ ಈ ಕಾದಂಬರಿಯನ್ನು ಲೈಬ್ರರಿಗಳಲ್ಲಿ ಬ್ಯಾನ್ ಮಾಡಲಾಗಿತ್ತು. ಈ ಕಾರಣಕ್ಕಾಗಿಯೇ ಸೇಂಟ್ ಲೂಯಿಸ್‌ನ ಫೈನ್ ಆರ್ಟ್ಸ್ ಕ್ಲಬ್‌ನಲ್ಲಿ ಈಕೆ ಪ್ರವೇಶ ಪಡೆಯಲಾಗಲಿಲ್ಲ. ವಿಮರ್ಶೆಗೆ ಹೆಚ್ಚು ಸೂಕ್ಷ್ಮಜ್ಞಳಾಗಿದ್ದ ಕೇಟ್ ಚಾಪಿನ್ 'ದಿ ಅವೇಕನಿಂಗ್' ಕಾದಂಬರಿಯ ಬಗ್ಗೆಗಿನ ಕಟುವಿಮರ್ಶೆಯಿಂದ ನೊಂದು ಬರೆಯುವುದನ್ನೇ ನಿಲ್ಲಿಸಿಬಿಟ್ಟಿದ್ದಳು. ಆಕೆ ಸತ್ತದ್ದು 1904ರಲ್ಲಿ.

ಆ ಕಾಲದಲ್ಲಿ ಮಹಿಳಾ ಚಳುವಳಿ ತೀವ್ರವಾಗಿರಲಿಲ್ಲ. ವಿಕ್ಟೋರಿಯನ್ ಕಾಲದ ನೈತಿಕತೆಗಳು ಹೆಂಗಸರ ಬದುಕನ್ನು ಬಲವಾಗಿ ಕಟ್ಟಿ ಹಿಡಿದಿದ್ದವು. ಇಂತಹ ಸಂದರ್ಭದಲ್ಲಿ ಕೇಟ್ ಚಾಪಿನ್ 'ದಿ ಅವೇಕನಿಂಗ್' ಕಾದಂಬರಿಯನ್ನು ಬರೆದಿದ್ದಳು ಎಂಬುದು ಅತ್ಯಂತ ಆಶ್ಚರ್ಯಕರ ಸಂಗತಿಯಾಗಿದೆ. ಜೊತೆಗೆ ಎಂತಹ ಕಟ್ಟು ನಿಟ್ಟು ಸಂಪ್ರದಾಯವಾದೀ ಸಂದರ್ಭಗಳೂ ಸಹ ಹೆಣ್ಣಿನ ಒಳತೋಟಿಯನ್ನು ಸಂಪೂರ್ಣವಾಗಿ ಕಟ್ಟಿ ಹಾಕುವಲ್ಲಿ ವಿಫಲವಾಗಬಲ್ಲವು ಎಂಬುದನ್ನು ಸಹ ಈ ಕಾದಂಬರಿ ಎತ್ತಿ ಹಿಡಿಯುತ್ತದೆ.

ಮದುವೆಯ ಮಹತ್ವ, ಈ ಮದುವೆಗಾಗಿ ಹೆಣ್ಣು ಮಕ್ಕಳು ತಮ್ಮನ್ನು ಅಲಂಕರಿಸಿಕೊಳ್ಳಬೇಕಾದ ಮಹತ್ವ, ಪಾರ್ಟಿಗಳಲ್ಲಿ ತಮ್ಮ ಜೊತೆ ಆಯ್ಕೆ ಮಾಡಿಕೊಳ್ಳುವುದಕ್ಕಾಗಿ ಬೊಂಬೆಗಳಂತೆ ಅಲಂಕರಿಸಿಕೊಂಡು ಎಲ್ಲಾ ತರಹ ಮುಖವಾಡಗಳನ್ನು ಬೆಳೆಸಿಕೊಳ್ಳುವ ಅಗತ್ಯವನ್ನು ಜೇನ್ ಆಸ್ಟಿನ್‌ನಂತಹ ಲೇಖಕಿ ಬರೆಯುತ್ತಿರುವ ಸಂದರ್ಭದಲ್ಲಿಯೇ ಕೇಟ್. ಚಾಪಿನ್ ಕೂಡಾ ಬರೆಯುತ್ತಿದ್ದುದು. ಈಕೆ 'ದಿ ಅವೇಕನಿಂಗ್'ನಲ್ಲಿ ಬರೆದುದು ಮದುವೆಯ ನಿರರ್ಥಕತೆ, ಸ್ವಂತಿಕೆಯ ಹುಡುಕುವಿಕೆ, ಚೌಕಟ್ಟುಗಳಿಗೆ ಹೊಂದಿಕೊಳ್ಳಲಾಗದ ಮಾನಸಿಕ ಸ್ಥಿತಿ, ಸ್ವತಂತ್ರ ಮನೆಯ ಕಲ್ಪನೆ ಹಾಗೂ ತಾಯ್ತನ ಹುಟ್ಟುಹಾಕುವ ದ್ವಂದ್ವಗಳ ಬಗ್ಗೆ. 1899ರಲ್ಲಿ ಕೇಟ್ ಚಾಪಿನ್ ಬರೆದ 'ದಿ ಅವೇಕನಿಂಗ್' ಕಾದಂಬರಿ ಇಂದಿನ ಮಹಿಳೆಯರ ತುಮುಲ/ದ್ವಂದ್ವಗಳನ್ನು ಎತ್ತಿ ಹಿಡಿಯುತ್ತದೆ. ಹಾಗಾಗಿ ಈ ಕಾದಂಬರಿಯಲ್ಲಿ ಕೇಟ್ ಚಾಪಿನ್ನಳ ಪ್ರಾಮಾಣಿಕ ಬರಹದ ತುಡಿತವನ್ನು ಕಾಣಬಹುದಾಗಿದೆ.

ಮಹಿಳಾ ಚಳುವಳಿ ಬಲವತ್ತರವಾಗಿ ಬೆಳೆದ ಸಂದರ್ಭ ಈ ಕಾದಂಬರಿಯ ಮಹತ್ವವನ್ನು ಬೆಳಕಿಗೆ ತಂದಿದೆ. ಇಂದು ಇದು ಸ್ತ್ರೀ ಸ್ವಾತಂತ್ರ್ಯದ ಧ್ವನಿಯಾಗಿ, ಸ್ತ್ರೀ ಲೈಂಗಿಕತೆಯ ಸಮರ್ಥನೆಯಾಗಿ ಹಾಗೂ ಪಿತೃಪ್ರಧಾನ್ಯತೆಗೆ ನೀಡಿದ ದೊಡ್ಡ ಶಾಕ್ ಆಗಿ ಕಾಣಿಸಿಕೊಂಡಿದೆ. ಡಿ. ಎಚ್. ಲಾರೆನ್ಸ್ ಎದುರಿಸಿದ ರೀತಿಯ ಕಟು ಟೀಕೆ, ವಿಮರ್ಶೆಗಳನ್ನು ಕೇಟ್ ಚಾಪಿನ್ ಕೂಡಾ ಅನುಭವಿಸಿದ್ದಳು. ಇಂದಿಗೆ ಅಂದರೆ 1999ಕ್ಕೆ ಈಕೆ ಈ ಕಾದಂಬರಿ ಬರೆದು ನೂರು ವರುಷಗಳಾದವು. ಈಕೆ ನೂರು ವರುಷಗಳ ಹಿಂದೆ ಎತ್ತಿದ ಪ್ರಶ್ನೆಗಳು ನಮಗೆ ಇಂದಿಗೂ ಪ್ರಶ್ನೆಗಳಾಗಿರುವುದು, ಹೋರಾಟವಾಗಿರುವುದು ವಿಪರ್ಯಾಸವಾಗಿದೆ.

ಕೇಟ್ ಚಾಪಿನ್‌ಗೆ ಪಿಯಾನೋ ಹಾಗೂ ಸಂಗೀತದಲ್ಲಿ ಅಪಾರವಾದ ಆಸಕ್ತಿ ಇತ್ತು. 1870ರಲ್ಲಿ ಮದುವೆಯಾದ ಈಕೆ 10 ವರುಷದಲ್ಲಿ ಆರು ಮಕ್ಕಳ ತಾಯಿಯಾಗಿದ್ದಳು. ಲ್ಯೂಸಿಯಾನದಲ್ಲಿ ಸಂಪ್ರದಾಯಕ್ಕೆ ವಿರೋಧವಾಗಿ ಆಕೆ ಬದುಕುತ್ತಿದ್ದ ರೀತಿ ಎಲ್ಲರ ಬಾಯಿ ಮಾತಾಗಿತ್ತು. 1882ರಲ್ಲಿ ಈಕೆಯ ಗಂಡ ಆಸ್ಕರ್ ಚಾಪಿನ್ ಸತ್ತಾಗ ಇಡಿಯ ಕುಟುಂಬದ ಹೊಣೆ ಈಕೆಯ ಮೇಲೆ ಬಿತ್ತು.

ದೊಡ್ಡ ಕುಟುಂಬವನ್ನು ಸಾಕುವ ಹೊಣೆ ಹೊತ್ತ ಕೇಟ್ ಬರಹಕ್ಕೆ ತನ್ನನ್ನು ಅರ್ಪಿಸಿಕೊಂಡಳು. 1885ರಲ್ಲಿ ಆಕೆಯ ತಾಯಿ ಸತ್ತಾಗ ಕೇಟ್ ಚಾಪಿನ್‌ಳ ಬದುಕು ದುರಂತಮಯವಾಗಿತ್ತು. 'ಇಫ್ ಇಟ್ ಮೈಟ್ ಬಿ', ಪದ್ಯ, 'ಎಟ್ ಫಾಲ್ಟ್' ಕಾದಂಬರಿ ಹಾಗೂ ಅನೇಕ ಸಣ್ಣ ಕತೆಗಳನ್ನು ಈಕೆ ಈ ಸಂದರ್ಭದಲ್ಲಿಯೇ ಬರೆದಳು.

1897ರ ಸುಮಾರಿಗೆ ಕೇಟ್ ಚಾಪಿನ್ 'ದಿ ಅವೇಕನಿಂಗ್' ಕಾದಂಬರಿಯನ್ನು ಬರೆಯಲು ಪ್ರಾರಂಭಿಸಿ 1899ರಲ್ಲಿ ಇದನ್ನು ಪ್ರಕಟಿಸಿದಳು. ಜಾನ್ ಡಿಲೋನ್ ಹಾಗೂ ಪ್ರಕಾಶಕ ವಿಲಿಯಮ್ ಜೊತೆಗೆ ಕೇಟ್ ಚಾಪಿನ್‌ಗೆ ಇದ್ದ ಸಂಬಂಧ ಈ ಕಾದಂಬರಿಯ ಹಿನ್ನೆಲೆಯ ಸಂದರ್ಭವಾಗಿದೆ ಎಂದು ಹೇಳಲಾಗುತ್ತದೆ. ಈ ಕಾದಂಬರಿ ಬಗ್ಗೆಗಿನ ಕಟು ಟೀಕೆಯು ಆಕೆಯ ಹೃದಯವನ್ನು ಕಲಕಿದ್ದು, 1904ರಲ್ಲಿ ಬ್ರೇನ್ ಹ್ಯಾಮರೇಜ್ ಆಗಿ ಈಕೆ ತೀರಿಕೊಂಡಳು.

ಕಾದಂಬರಿ 'ದಿ ಅವೇಕನಿಂಗ್' ಪ್ರಾರಂಭವಾಗುವುದು ಗಿಳಿಯೊಂದು ಪಂಜರದಲ್ಲಿರುವ ಸಾಂಕೇತಿಕತೆಯಿಂದ, ಕಾದಂಬರಿಯ ಕೊನೆ ಎಡ್ನಾ-ಕಾದಂಬರಿಯ ನಾಯಕಿಯ ಸಾವಿನಲ್ಲಿ ಮುಕ್ತಾಯವಾಗುತ್ತದೆ. ಸಾವನ್ನು ಇಲ್ಲಿ ಸ್ವಾತಂತ್ರ್ಯದ ಸಂಕೇತವಾಗಿ ಬಳಸಿಕೊಳ್ಳಲಾಗಿದೆ.

'ದಿ ಅವೇಕನಿಂಗ್' ಎಡ್ನಾ ಪಾನ್‌ಟೆಲ್ಲಿಯರಳ ಕತೆ. 29 ವರುಷದ ಈಕೆಯ ಗಂಡ ಗೌರವಸ್ಥ. ಇದ್ದುದರಲ್ಲಿ ಶ್ರೀಮಂತ, ಆಕೆಯ ಬಗ್ಗೆ ಆತನಿಗೆ ವಿಶೇಷ ಕಾಳಜಿ, ಕನಿಕರ.

"You are burnt beyond recognition.... (P.3)..... looking at his wife as one looks at a valuable piece of personal property, which has suffered some damange (p. 31). ಈಕೆಗೆ ಇಬ್ಬರು ಮಕ್ಕಳು, ಈಕೆಯ ಗಂಡ, ಮನೆಯ ಸುಖ ಈಕೆಯ ಮನಸ್ಸನ್ನು ಹಿಡಿದಿಡುವಲ್ಲಿ ಸೋಲುತ್ತವೆ. ಆಕೆಗೆ ಮಕ್ಕಳ ಬಗ್ಗೆಗಿರುವ ಕಾಳಜಿ ರಹಿತ ನಡತೆಗಳು ಅವನನ್ನು ಆಗೀಗ್ಗೆ ಸಿಟ್ಟಿಗೆ ಎಬ್ಬಿಸುತ್ತವೆ. ಮಕ್ಕಳನ್ನು ನೋಡಿಕೊಳ್ಳುವುದು ತಾಯಿಯ ಕೆಲಸವಲ್ಲದಿದ್ದರೆ ಇದು ಭೂಮಿ ಮೇಲೆ ಯಾರ ಕೆಲಸ ಎಂದು ಆತ ಆಕೆಯ ಮೇಲೆ ರೇಗಿಕೊಳ್ಳುತ್ತಾನೆ. ಇಂತಹ ಸಂದರ್ಭಗಳಲ್ಲಿ ಆಕೆ ಹೊರಗೆ ಕುಳಿತುಕೊಂಡು ಒಬ್ಬಳೇ ಅಳುತ್ತಾಳೆ. ಆಕೆಯ ಪಾಡಿಗೆ ಆಕೆ ಅಳುತ್ತಾಳೆ, ಹೇಳಲಾಗದ ವೇದನೆ. ಆಕೆಯ ಪ್ರಜ್ಞೆಗೆ ಆತನ ಬೈಗುಳನ್ನು ಅರಗಿಸಿಕೊಳ್ಳುವುದು ಸಾಧ್ಯವಿಲ್ಲ, ಮ್ಯಾಡಂ ರ್‍ಯಾಟಿಗ್‌ನೋಲ್ ತರಹ ಈಕೆ ಮನೆಯನ್ನೇ ತನ್ನ ಸರ್ವಸ್ವವನ್ನಾಗಿ ಮಾಡಿಕೊಳ್ಳಲಾರಳು.

ರಾಬರ್ಟ್ ಲೆಬ್ರನ್ ಈಕೆಯ ಹಾಗೂ ಸುತ್ತಮುತ್ತಲಿನ ಕುಟುಂಬಗಳ ಪರಿಚಯಸ್ಥ ಯುವಕ. ಗ್ರ್ಯಾಂಡ್ ಐಸ್ಲ್‌ನಲ್ಲಿ ರಾಬರ್ಟ್ ಲೆಬ್ರನ್‌ನ ಸನಿಹದಲ್ಲಿ ಈಕೆ ತನ್ನ ಆತ್ಮಕ್ಕೆ, ಹೃದಯಕ್ಕೆ ಪ್ರಥಮ ಬಾರಿಗೆ ಎದುರಾಗಿ ನಿಲ್ಲುತ್ತಾಳೆ. ರಾಬರ್ಟ್ ಲೆಬ್ರನ್ ಈಕೆಯನ್ನು ಆಕರ್ಷಿಸಿದಂತೆ, ಈಕೆಯ ಭಾವನೆಗಳನ್ನು ಕಲಕುತ್ತಾನೆ. ವಾಪಸ್ಸು ಮನೆಗೆ ಬಂದಾಗ ಆಕೆಯ ಹೃದಯದ ತರಂಗಗಳು ತುಯ್ದಾಡತೊಡಗುತ್ತವೆ. ಮೆಡಿಮೇಯ್‌ಸೆಲ್ ರೇಯಿಜ್‌ಳ ಪಿಯಾನೋಗೆ ಆಕೆ ತುಡಿಯುವುದು ಸಹ ಆಕೆಯ ಹಾಯ್ದಾಡುವ ಭಾವನೆಗಳ ಮುಖಾಂತರವೇ. ಆಕೆಯ passion, ಲೈಂಗಿಕಾಸಕ್ತಿಗಳು ಆಕೆಗೆ ವ್ಯಕ್ತವಾಗುವುದೇ ರೇಯಿಜ್‌ಳ ಸಂಗೀತದಲ್ಲಿ. ಸಮುದ್ರದ ಅಲೆಗಳು ಆಕೆಯ ದೇಹವನ್ನು ತೊಯ್ದಾಡಿಸುವ ತರಹ, ಬಡಿಯುವ ತರಹ ಆಕೆಯ ಅಂತರಂಗದ ಲೈಂಗಿಕ ಭಾವನೆಗಳು ಹೃದಯದಲ್ಲಿ, ಆಕೆಯ ಆತ್ಮದಲ್ಲಿ ತುಡಿಯುತ್ತವೆ. ಈ ತುಯ್ದಾಟಗಳು ರೇಯಿಜ್‌ಳ ಸಂಗೀತದಲ್ಲಿ ಸ್ಪಷ್ಟವಾದಾಗ ಎಡ್ನಾ ಆಕೆಯ ಸಂಗೀತಕ್ಕೆ ತುಡಿಯುತ್ತಾಳೆ. ಮೆಡಿಮೋಸೆಲ್ಲಿಯ 'ಹೇಗಿತ್ತು ಸಂಗೀತ' ಎಂಬ ಪ್ರಶ್ನೆಗೆ ಉತ್ತರ ಕೊಡಲಾಗದೇ ಆಕೆಯ ಕೈಯನ್ನು ಗಟ್ಟಿಯಾಗಿ ಅಮುಕುತ್ತಾಳೆ. 'ನಿನಗೊಬ್ಬಳಿಗಾಗಿ ಸಂಗೀತ ನುಡಿಯುವುದು ಸಾರ್ಥಕ' ಎನಿಸುತ್ತದೆ ಎಂಬರ್ಥದ ಆಕೆಯ ಮಾತುಗಳು ಎಡ್ನಾ ಸಂಗೀತಕ್ಕೆ ಎಷ್ಟು ಸ್ಪಂದಿಸಿದ್ದಳು ಎಂಬುದನ್ನು ಧ್ವನಿಸುತ್ತದೆ.

ಎಡ್ನಾಳ ಬಗ್ಗೆ ತನಗಿದ್ದ ಪ್ರೀತಿ, ಆಕರ್ಷಣೆ ಗುರುತಿಸಿಕೊಂಡ ರಾಬರ್ಟ್ ಇದೆಲ್ಲದರಿಂದ ದೂರವಾಗಲೆಂಬಂತೆ ಇದ್ದಕ್ಕಿದ್ದ ಹಾಗೆ ಮೆಕ್ಸಿಕೋಗೆ ಹೋಗುತ್ತಾನೆ. ಇದ್ದಕ್ಕಿದ್ದಂತೆ ರಾಬರ್ಟ್ ದೂರವಾದಾಗ ಅನೇಕ ಪ್ರಶ್ನೆಗಳು ಎಡ್ನಾಳ ಅಂತರಂಗವನ್ನು ಕಲಕುತ್ತಾ ಹೋಗುತ್ತವೆ. ಆತನ ಗೈರುಹಾಜರಿಯಲ್ಲಿಯೇ ಆತನ ಬಗ್ಗೆ ತನಗಿರುವ ಅಂತರಂಗದ ಒಲವನ್ನು ಆಕೆ ಒಪ್ಪಿಕೊಳ್ಳುತ್ತಾ ಹೋಗುತ್ತಾಳೆ.

ಈಗಿನ ಅಂತರಂಗದ ಅರಿವಿನ ಪಾತ್ರದಿಂದಾಗಿ ಆಕೆ ತಾಯಿ, ಹೆಂಡತಿಯ ಪಾತ್ರದಲ್ಲಿ ಗುರುತಿಸಿಕೊಂಡು ಸಂತೋಷಿಸುವಲ್ಲಿ ವೈರುಧ್ಯಗಳನ್ನು ತೋರಿಸುತ್ತಾ ಹೋಗುತ್ತಾಳೆ. ಸ್ವಂತ ತಂಗಿಯ ಮದುವೆಗೆ ಬರಲು ತನಗಿಷ್ಟವಿಲ್ಲವೆಂದು ತಂದೆಯ ಕೋಪಕ್ಕೆ ಬಲಿಯಾಗುತ್ತಾಳೆ. ಕುಟುಂಬದ ಪಾರ್ಟಿಗಳಲ್ಲಿ ತೊಡಗಿಸಿಕೊಳ್ಳಲು ಕಷ್ಟಪಡುತ್ತಾಳೆ. ಮನಸ್ಸಿಟ್ಟು ಅಡಿಗೆ ಮಾಡುವುದು ಆಕೆಗೆ ಕಷ್ಟವಾಗುತ್ತದೆ. ಈ ರೀತಿಯ ಪಿತೃಪ್ರಾಧಾನ್ಯತೆ ನಿರೀಕ್ಷಿಸುವ ಪಾತ್ರಗಳಿಗೆ ತುಡಿಯುವುದು ಕಷ್ಟವಾದಾಗ ತನಗಿಷ್ಟವಾಗದಿರುವುದನ್ನು ಎಡ್ನಾ ಸ್ಪಷ್ಟವಾಗಿ ನಿರಾಕರಿಸುತ್ತಾ ಹೋಗುತ್ತಾಳೆ.

ಆಕೆಯ ಗಂಡನಿಗೆ ಇದರಿಂದ ಭಯವಾಗಿ ಆಕೆಯ ವಿಚಿತ್ರ ವರ್ತನೆಗಳ ಬಗ್ಗೆ ಡಾಕ್ಟರ್‌ರೊಬ್ಬರಲ್ಲಿ ವಿಚಾರಿಸುತ್ತಾನೆ. ಮಹಿಳಾ ಸ್ವಾತಂತ್ರ್ಯದ ಬಗ್ಗೆ ಆಕೆಯ ಹುಚ್ಚು ಕಲ್ಪನೆಗಳ ಬಗ್ಗೆ ಅಪಹಾಸ್ಯ ಮಾಡುತ್ತಾನೆ. 'ಮದುವೆ'ಗಳಂತಹ ಪಾರ್ಟಿಗಳಿಗೆ ಹೋಗಲಿಚ್ಛಿಸದ ಈಕೆಗೆ ಇರಬಹುದಾದ ತೊಂದರೆ ಏನಿದ್ದೀತೆಂದು ಡಾಕ್ಟರ್‌ರಲ್ಲಿ ವಿಚಾರಿಸುತ್ತಾನೆ. ಆಕೆಯನ್ನು ಸ್ವಲ್ಪ ದಿನ ಆಕೆಯ ಪಾಡಿಗೇ ಬಿಡಲು ಹೇಳುವ ಡಾಕ್ಟರ್ ಆಕೆಯನ್ನು ತಾನು ಸರಿಪಡಿಸುತ್ತೇನೆ ಎಂಬ ಆಶ್ವಾಸನೆಯನ್ನೇ ನೀಡುತ್ತಾನೆ.

ಅಂತರಂಗದ ತುಮುಲಗಳ ಸಂವೇದನೆಗೋ ಎಂಬಂತೆ ಎಡ್ನಾ

ತನ್ನನ್ನು ಚಿತ್ರಕಲೆಯಲ್ಲಿ ಹಾಗೂ ರೇಯಿಜ್‌ಳ ಸಂಗೀತದಲ್ಲಿ ತೊಡಗಿಸಿಕೊಳ್ಳುತ್ತಾ ಹೋಗುತ್ತಾಳೆ. ರೇಯಿಜ್‌ಳಿಗೆ ಬರುವ ರಾಬರ್ಟ್ ಪತ್ರಗಳ ತುಂಬ ಎಡ್ನಾಳೇ ತುಂಬಿದ್ದು, ಎಡ್ನಾ ಹಾಗೂ ರಾಬರ್ಟ್ ಮಧ್ಯದ ಪ್ರೀತಿಯ ತುಡಿತಗಳು ರೇಯಿಜ್‌ಳಿಗೆ ಅರ್ಥವಾಗುತ್ತದೆ. ರಾಬರ್ಟ್‌ನ ಪತ್ರಗಳನ್ನು ಎಡ್ನಾಳಿಗೆ ಓದುವುದಕ್ಕೆ ನೀಡುವ ಮುಖಾಂತರ ಎಡ್ನಾ ಅಂತರಂಗವನ್ನು ಆಕೆಗೇ ಸ್ಪಷ್ಟಗೊಳಿಸುವುದರ ಜೊತೆಗೆ ರಾಬರ್ಟ್‌ಗೆ ಆಕೆಯ ಬಗೆಗಿದ್ದ ಒಲವನ್ನೂ ರೇಯಿಜ್ ಸ್ಪಷ್ಟಗೊಳಿಸುತ್ತಾಳೆ.

ಈ ಮಧ್ಯದಲ್ಲಿ ಆಕೆ ಮತ್ತೋರ್ವ ವ್ಯಕ್ತಿ ಆರೋಬಿ೯ ಭೆಟ್ಟಿಯಾಗುತ್ತಾಳೆ. ಆಕೆಯ ಲೈಂಗಿಕಾಸಕ್ತಿಗಳು ಮತ್ತೆ ಸ್ಪಷ್ಟವಾಗತೊಡಗಿದಾಗ ರಾಬರ್ಟ್‌ನ ಪ್ರೀತಿಯ ನೆನಪಿನಲ್ಲಿ ಆರೋಬಿ೯ಗೆ ಹತ್ತಿರವಾಗುತ್ತಾಳೆ. ಆತನ ಮುದ್ದಿಸುವಿಕೆ ಆಕೆಗೆ ಅನಿರೀಕ್ಷಿತವಾಗುತ್ತದೆ. ಆಕೆಯೊಳಗೇ ಉಂಟಾಗುವ ವೈರುಧ್ಯದ ಘರ್ಷಣೆಗಳಲ್ಲಿಯೂ ಸಹ ಆಕೆಗೆ ಈ ಬಗ್ಗೆ ನಾಚಿಕೆಯಾಗಲೀ, ಪಶ್ಚಾತ್ತಾಪವಾಗಲೀ ಇಲ್ಲ. ಆಕೆಗಾದ ಪಶ್ಚಾತ್ತಾಪವೆಂದರೆ - ಆಕೆ ಇಷ್ಟಪಟ್ಟ, ಆಕೆಯಲ್ಲಿ ಅಂತರಂಗದ ಲೈಂಗಿಕಾಸಕ್ತಿ ಕೆರಳಿಸಿದ್ದ, ಆಕೆಯ ಬಗ್ಗೆ ಆಕೆಗೊಂದು ಅರಿವು ಮೂಡಿಸಿದ್ದ ವ್ಯಕ್ತಿ ರಾಬರ್ಟ್‌ನ ಮುದ್ದಿಸುವಿಕೆ ಅದಾಗಿರಲಿಲ್ಲ ಎಂಬ ಬಗ್ಗೆ ಮಾತ್ರ ಆಕೆಯ ಭಾವನೆಗಳು ಹೊಯ್ದಾಡತೊಡಗುತ್ತವೆ. ಆರೋಬಿ೯ ಮುದ್ದಿಸಿದಾಗ - ತನ್ನ ಗಂಡ ಏನೆಂದುಕೊಳ್ಳುತ್ತಾನೆ ಎಂಬುದಕ್ಕಿಂತ ಹೆಚ್ಚಾಗಿ ರಾಬರ್ಟ್ ತನ್ನ ಬಗ್ಗೆ ಏನೆಂದುಕೊಳ್ಳುತ್ತಾನೆ ಎಂಬುದೇ ಆಕೆಗೆ ಹೆಚ್ಚಾಗಿ ಕಾಡತೊಡಗುತ್ತದೆ.

ಎಡ್ನಾಳಲ್ಲಿ ತುಡಿಯುವಿಕೆ ಇರುವುದು ಬರಿಯ ಲೈಂಗಿಕಾಸಕ್ತಿಗಳಲ್ಲಿ ಮಾತ್ರವಲ್ಲ. ತನ್ನ ಅಂತರಂಗದ ಧ್ವನಿಗೆ ಸ್ಪಷ್ಟತೆ ಕೊಡಲೆಂಬಂತೆ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಬಯಸಿ 'ಪಿಜನ್ ಹೌಸ್' ಎಂಬ ತನ್ನ ಚಿಕ್ಕ ಮನೆಯನ್ನು establish ಮಾಡುತ್ತಾಳೆ. ಗಂಡನಿಗೆ ಈ ಬಗ್ಗೆ ಪತ್ರ ಬರೆದು ತಿಳಿಸಿದಾಗ ಆತ ಆಕೆಯ ಮುಂಗೋಪಿತನ ಎಂದು ಬಗೆಯುತ್ತಾನೆ. ಆರ್ಥಿಕವಾಗಿ ಉಂಟಾಗುವ ಮುಗ್ಗಟ್ಟಿನ ಬಗ್ಗೆ ಯೋಚಿಸುತ್ತಾನೆ. ಆದರೆ ಆಕೆಯ ಮನಸ್ಥಿತಿಯ ಅರಿವಿದ್ದ ಆತ ವ್ಯವಹಾರಿಕ ಚತುರತೆಯಿಂದ ಇಡಿಯ ಸನ್ನಿವೇಶ ನಿಭಾಯಿಸಲು ಪ್ರಯತ್ನಿಸುತ್ತಾನೆ. ತನ್ನ ಮನೆಯನ್ನು ಹೊಸದಾಗಿ ಅಲಂಕರಿಸುವ ಬಗ್ಗೆ, ಬೇಸಿಗೆಯಲ್ಲಿ ಆಕೆಯನ್ನು ವಿದೇಶಕ್ಕೆ ಕರೆದೊಯ್ಯುವ ಬಗ್ಗೆ ಬರೆದು ಆಕೆ ಮತ್ತೊಂದು ಮನೆಗೆ ಹೋಗದಿರುವಂತೆ ತಡೆಯಲು ಪ್ರಯತ್ನಿಸುತ್ತಾನೆ.

ಗಂಡನ ಈ ಚತುರತೆಗಳು ಎಡ್ನಾಗೆ ಅರ್ಥವಾಗುತ್ತವೆ. ಆದಾಗ್ಯೂ ಮುಂದುವರಿದು ಆಕೆ 'ಪಿಜನ್ ಹೌಸ್' ಅಲಂಕರಿಸುತ್ತಾಳೆ. ಸ್ವತಂತ್ರ ಮನೆ, ಸ್ವಾವಲಂಬಿತನ ಆಕೆಯ ಬದುಕಿನ ಪ್ರೀತಿಯನ್ನು ಹೆಚ್ಚಿಸುತ್ತದೆ. ಮಕ್ಕಳೊಂದಿಗೆ ಹೃದಯಪೂರ್ವಕವಾಗಿ ವರ್ತಿಸಲು ಪ್ರಾರಂಭಿಸುತ್ತಾಳೆ. ಅವರ ಮುದ್ದಿಸುವಿಕೆಯನ್ನು ಅಂತರಂಗದ ಆನಂದದಿಂದ ಸವಿಯಲು ಪ್ರಾರಂಭಿಸುತ್ತಾಳೆ.

ರಾಬರ್ಟ್ ಮರಳಿ ಬಂದಾಗ ಇಬ್ಬರೂ ತಮಗಿರುವ ಪ್ರೀತಿಯನ್ನು ಒಪ್ಪಿಕೊಳ್ಳುತ್ತಾರೆ. ಪ್ರಪಂಚದ ಯಾವುದೂ ಕೂಡಾ ತಮ್ಮ ಪ್ರೀತಿಯನ್ನು ಅಳಿಸಿ ಹಾಕಲಾರದು ಎಂದುಕೊಳ್ಳುತ್ತಾರೆ. ರಾಬರ್ಟ್ ಜೊತೆಗಿನ ತನ್ನ 'extreme passion' ಒಪ್ಪಿಕೊಳ್ಳುವ ಸಂದರ್ಭದಲ್ಲಿಯೇ ಎಡ್ನಾಳಿಗೆ ಆಕೆಯ ಗೆಳತಿ ಎಡಲಾಳಿಂದ ಕರೆಬರುತ್ತದೆ. ರಾಬರ್ಟ್‌ಗೆ ಕಾಯಲೇಬೇಕೆಂದು ಹೇಳಿ ಎಡ್ನಾಳ ನೋಡಲು ನಡೆಯುವ ಎಡ್ನಾ ಹೊಸ ಸನ್ನಿವೇಶವೊಂದಕ್ಕೆ ಎದುರಾಗುತ್ತಾಳೆ. ಎಡ್ನಾ 'ನಿನ್ನ ಮಕ್ಕಳ ಬಗ್ಗೆ ಯೋಚಿಸು' ಎಂದಾಗ ತಾನು ಬೇಜವಾಬ್ದಾರಿಯವಳೇ ಎಂಬ ಸಂಕಟ ಆಕೆಯಲ್ಲಿ ಉದ್ಭವವಾಗುತ್ತದೆ. ಒಂದು ಕಡೆ ರಾಬರ್ಟ್, ಇನ್ನೊಂದೆಡೆ ಮಕ್ಕಳು. ಈ ದ್ವಂದ್ವದಲ್ಲಿಯೇ 'ಪಿಜನ್ ಹೌಸ್'ಗೆ ಮರಳುತ್ತಾಳೆ. ಆದರೆ ರಾಬರ್ಟ್ 'ನಿನ್ನನ್ನು ಬಿಟ್ಟು ಹೋಗುತ್ತಿದ್ದೇನೆ, ಏಕೆಂದರೆ ನಾನು ನಿನ್ನನ್ನು ಇಷ್ಟಪಡುತ್ತೇನೆ' ಎಂಬ ಪತ್ರವೊಂದನಿಟ್ಟು ಆಕೆಯಿಂದ ದೂರ ಹೊರಟು ಹೋಗಿರುತ್ತಾನೆ. ಮಕ್ಕಳ ಬಗ್ಗೆಗಿನ ತನ್ನ ಜವಾಬ್ದಾರಿ, ರಾಬರ್ಟ್ ಬಗ್ಗೆಗಿನ ಪ್ರೀತಿ - ಇವೆರಡರಿಂದ ಮುಕ್ತಿ ಹೊಂದಲೆಂಬಂತೆ ಎಡ್ನಾ ಮೆಕ್ಸಿಕೋ ಸಮುದ್ರದಲ್ಲಿ ಮುಳುಗಿ ತನ್ನನ್ನು ತಾನೇ ಕೊಂದುಕೊಳ್ಳುತ್ತಾಳೆ.

'ದಿ ಅವೇಕನಿಂಗ್' - ನೂರು ವರುಷದ ಹಿಂದೆ ಬರೆದ ಕಾದಂಬರಿಯಾಗಿದ್ದಾಗ್ಯೂ ಎತ್ತುವ ಪ್ರಶ್ನೆಗಳು ಇಂದಿಗೂ ಪ್ರಸ್ತುತವೇ. ಚಾರಿತ್ರಿಕವಾಗಿ ಮಾತ್ರ ಮುಖ್ಯವಾಗಿರುವ ಈ ಕಾದಂಬರಿಯ ಮಹತ್ವವನ್ನು ನಾವು ಅರಿಯಬೇಕಾಗಿದೆ. ಪಿತೃಪ್ರಾಧಾನ್ಯತೆಯ ಲೈಂಗಿಕ, ಆರ್ಥಿಕ, ಸಾಮಾಜಿಕ ಆಯಾಮಗಳ ಜೊತೆ ತಳಕು ಹಾಕಿಕೊಂಡ ಎಡ್ನಾಳ ಹೋರಾಟದ ಬದುಕು ಮಹಿಳಾ ಚಳುವಳಿಯ ಅನೇಕ ಹೋರಾಟಗಳಿಗೆ ಕನ್ನಡಿ ಹಿಡಿದಂತಿರುವುದರಿಂದ 'ದಿ ಅವೇಕನಿಂಗ್' ಕಾದಂಬರಿ ಮಹತ್ವದ್ದು ಎಂದು ನನಗೆನ್ನಿಸುತ್ತದೆ.

ಚಂಪಾವತಿ ಎಚ್. ಎಸ್.

ಆಕರಗಳು :

'ದಿ ಅವೇಕನಿಂಗ್' - ಕಾದಂಬರಿ, ಕೇಟ್ ಚಾಪಿನ್

'ಅವೇಕನಿಂಗ್ ದಿ ಫೀಮೇಲ್ ಸ್ಪಿರಿಟ್' - ಲೇಖನ

ಪ್ರಮೋದ್ ಕೆ. ನಾಯರ್‌ಷ ಢೆಬ್ ಹೆರಾಲ್ಡ್',

ಆಗಸ್ಟ್ 08, 1999

ಮಹಿಳೆಯ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆಯ ಅವಶ್ಯಕತೆ

ಇತ್ತೀಚಿನ ವರ್ಷಗಳಲ್ಲಿ ನಾವು ನೋಡುವ ಹಾಗೆ, ಮಹಿಳೆಯರು ತಮ್ಮ ಬದುಕಿನಲ್ಲಿ ಹಲವು ರೀತಿಯ ವ್ಯವಹಾರಗಳನ್ನು ನಿರ್ವಹಿಸುತ್ತಿರುವುದು, ಧೈರ್ಯವಾಗಿ ಮಾತನಾಡುವುದು, ತಮ್ಮ ಹಕ್ಕುಗಳ ಬಗ್ಗೆ ಕಾಳಜಿವುಳ್ಳವರಾಗಿರುವುದು ಹೀಗೆ ಹಲವಾರು ವಿಧಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಿದಂತಹ ಮಹಿಳೆಯರನ್ನು ನಾವಿಂದು ಕಾಣುತ್ತೇವೆ. ಗ್ರಾಮೀಣ, ನಗರ ಪ್ರದೇಶಗಳೆಂಬ ವ್ಯತ್ಯಾಸವಿಲ್ಲದೆ ಮಹಿಳೆಯರಲ್ಲಿ ಈ ಬದಲಾವಣೆ ಸಾಗಿದೆ. ಸಾಗುತ್ತಾ-ಬಂದಿದೆ. ಒಂದು ಕಾಲದಲ್ಲಿ ಖಾಕಿ ಬಟ್ಟೆಯ ಪೊಲೀಸರನ್ನು ನೋಡಿ, ಅವರಿಗೆ ಹೆದರಿ ಮನೆಯ ಒಳಗಡೆ ಅವಿತುಕೊಳ್ಳುವಂತಹ ಎಷ್ಟೋ ಮಹಿಳೆಯರನ್ನು ನಾವು ಕಂಡಿದ್ದೇವು. ಆದರೆ ಈಗ ಆ ವ್ಯಕ್ತಿಗಳ ಮುಂದೆ ಧೈರ್ಯವಾಗಿ ತಮ್ಮ ಸವಾಲನ್ನು ನೀಡುವ, ಹಾಗೂ ನೀಡುತ್ತಿರುವ ಮಹಿಳೆಯರೂ ಕೂಡ ಇಂದು ಹೆಚ್ಚಾಗುತ್ತಿದ್ದಾರೆ. ಇದಕ್ಕೆ ಅನೇಕ ಅಂಶಗಳು ಕಾರಣವಾಗಿದ್ದು, ಮಹಿಳೆಯರನ್ನು ಆಧುನಿಕ ಜಗತ್ತಿನತ್ತ ಕೊಂಡೊಯ್ಯುತ್ತಿವೆ.

ಮಹಿಳಾ ಚಳುವಳಿಗಳು, ಸಭೆ ಸಮಾರಂಭಗಳು, ಮಹಿಳಾ ಮೀಸಲಾತಿ, ರಾಜಕೀಯ ಅಧಿಕಾರಗಳು, ಇಂದು ಮಹಿಳೆಯರ ಇರುವಿಕೆಯ ಬಗ್ಗೆ ಅವರ ಸ್ಥಾನಮಾನದ ಬಗ್ಗೆ, ಅವರ ಹಕ್ಕಿಗಾಗಿ ಹೋರಾಟ ಮಾಡುವ ಬಗ್ಗೆ ಚಿಂತಿಸುವಂತೆ ಮಾಡಿವೆ. ತಮ್ಮ ಮಕ್ಕಳ-ಬಗ್ಗೆ ತಾವೇ ಸ್ವತಃ ಕುಟುಂಬಗಳಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು ಪಡೆಯುತ್ತಿದ್ದಾರೆ. ಕುಟುಂಬದಲ್ಲಿ ಕುಡಿದುಬಂದು ಗಲಾಟೆ ಮಾಡಿ, ಇವರ ಕೈಯಿಂದ ಹಣ ಕಿತ್ತುಕೊಂಡು, ತನ್ನ ಇಡೀ ಸಂಸಾರವನ್ನೇ ಬೀದಿಪಾಲು ಮಾಡುತ್ತಿದ್ದಂತಹ ತಮ್ಮ ಗಂಡಂದಿರಿಗೆ ಬುದ್ಧಿ ಹೇಳಿ ಅವರನ್ನು ಸರಿದಾರಿಗೆ ತರುವಂತಹ ಶಕ್ತಿಯನ್ನು ಕೂಡ ಅವರು ಪಡೆದುಕೊಳ್ಳುತ್ತಿದ್ದಾರೆ. ಇದಕ್ಕೆಲ್ಲಾ ಮುಖ್ಯ ಕಾರಣ ಅವರಲ್ಲಿನ ಆರ್ಥಿಕ ಸ್ವಾವಲಂಬನೆ, ಸ್ವಾತಂತ್ರ್ಯ ಸ್ವಾಭಿಮಾನದ ಬದುಕು ಅವರಿಗಿಂದು ಬೇಕಾಗಿದೆ. ಮಹಿಳೆ ಎಂದೂ ಅಬಲೆಯಲ್ಲಾ ಎಂದು ಅವರು ತೋರಿಸುತ್ತಿದ್ದಾರೆ. ಒಂದು ಕಾಲದಲ್ಲಿ ಹಲವು ರೀತಿಯ ಶೋಷಣೆಗೆ ಗುರಿಯಾದರೂ, ಅದಕ್ಕೆ ಎದುರಾಡದೆ ಅನುಭವಿಸಿ, ತಮ್ಮ ಪ್ರಾಣಗಳನ್ನು ಸಮರ್ಪಿಸಿಕೊಂಡಂತಹ ಮಹಿಳೆಯರೂ ಇದ್ದಾರೆ. ಆದರೀಗ ಈ ಸಮಸ್ಯೆಗಳನ್ನು ಹೇಗೆ ಬಗೆ ಹರಿಸಬೇಕೆಂಬ ಮಾರ್ಗಗಳನ್ನು ಇವರು ಕಂಡುಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ. ಅವರ ಆರ್ಥಿಕ ಸ್ವಾವಲಂಬನೆ ಹಾಗೂ ಶಿಕ್ಷಣ. ಈ ಮೂಲಕ ಅವರಿಂದು ಸಶಕ್ತತೆಯನ್ನು (Empoweriment) ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಾಕಷ್ಟು ಮನ್ನಣೆಯನ್ನು ಗಳಿಸುತ್ತಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಧೈರ್ಯ, ಶೌರ್ಯ, ಜ್ಞಾನ ಈ ಮೂಲಕವಾಗಿ ಪುರುಷರಿಗೆ ಸಮನಾದ ಅನೇಕ ಜವಾಬ್ದಾರಿಗಳನ್ನು ಇಂದು ಹೊಂದಿದ್ದಾರೆ. ಈ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಕೂಡ ತಾವು ಸಮರ್ಥರೆಂದು ಇಂದು ತೋರಿಸಿಕೊಡುತ್ತಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಇದ್ದಂತಹ ಮಹಿಳೆಯರ ಸ್ಥಾನಮಾನಗಳು ಇಂದು ಬದಲಾಗಿದೆ. ಆಕೆಯ ಬದುಕು ಸಮಾಜದ ಎಲ್ಲಾ ದಿಕ್ಕಿನಲ್ಲಿಯೂ ಸಂಪರ್ಕ ಹೊಂದಿದೆ. ಸಮಾಜದಲ್ಲಿ, ಕುಟುಂಬದಲ್ಲಿ ಪುರುಷರಿಗಿಂತಲೂ ಹೆಚ್ಚಿನ ಜವಾಬ್ದಾರಿಗಳನ್ನು ಹೊರುವ ಹಾಗೂ ಅವರಿಗಿಂತಲೂ ಹೆಚ್ಚು ಕೆಲಸ ಮಾಡುವ ಅಥವಾ ಕರ್ತವ್ಯಗಳನ್ನು ನಿಭಾಯಿಸುವ ಸಾಮರ್ಥ್ಯಗಳು ಇದ್ದಾಗ್ಯೂ ಇದೆಲ್ಲಾ ಅಂಶಗಳು ಗಣನೆಗೆ ಬಾರದೆ, ನವನಾಗರೀಕತೆಯ ಸೋಂಕಿನಿಂದಾಗಿ ಈಕೆಯ ಸಾಮರ್ಥ್ಯತೆಯು ಅಗೋಚರವಾಗಿಯೇ ಉಳಿಯುತ್ತಿರುವುದು ಅವರ ಪಾಲಿನ ದುರಂತವಾಗಿದೆ.

ಆರ್ಥಿಕ ಸ್ವಾತಂತ್ರ್ಯ ಮಹಿಳೆಯ ಬದುಕಿಗೆ ಎಷ್ಟು ಮುಖ್ಯವೋ ಆಯ್ಕೆಯ ಸ್ವಾತಂತ್ರ್ಯ ಕೂಡ ಮಹಿಳೆಯ ಪಾಲಿಗೆ ಅಷ್ಟೇ ಮುಖ್ಯವಾಗುತ್ತದೆ. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ, ಹೆಣ್ಣುಮಕ್ಕಳಿಗೆ ಆಯ್ಕೆಯ ಸ್ವಾತಂತ್ರ್ಯ ತುಂಬಾ ಕಡಿಮೆ. ಅವರಲ್ಲೂ ಗ್ರಾಮೀಣ ಪ್ರದೇಶಗಳಲ್ಲಂತೂ ಇಲ್ಲವೆಂದೇ ಹೇಳಬೇಕಾಗುತ್ತದೆ. ಎಷ್ಟೋ ಸಾಂಪ್ರದಾಯಿಕ ಕುಟುಂಬಗಳಲ್ಲಂತೂ ಹೆಣ್ಣುಮಕ್ಕಳು ಇದರ ಬಗ್ಗೆ ಮಾತನಾಡುವುದೇ ಒಂದು ರೀತಿಯ ಅಪರಾಧವೆಂಬಂತೆ ಭಾವಿಸುತ್ತಾರೆ. ಮತ್ತೆ ಆರ್ಥಿಕ ಸ್ವಾತಂತ್ರ್ಯ ಎಂಬುದು -ಆಯ್ಕೆಯ ಸ್ವಾತಂತ್ರ್ಯಕ್ಕೆ ಒಂದು ರೀತಿಯ ರಹದಾರಿ ಇದ್ದಹಾಗೆ ಇದರಿಂದಾಗಿ ಹೆಣ್ಣುಮಕ್ಕಳು ಅಥವಾ ಮಹಿಳೆಯ ಬದುಕು ಎಷ್ಟು ಕಠಿಣವೆನಿಸಿದರೂ ಅದನ್ನು ನಿಭಾಯಿಸುವ ಛಲವನ್ನು ಪಡೆದುಕೊಳ್ಳುತ್ತಾರೆ.

ಹೀಗೆ ಆಯ್ಕೆ-ಹಾಗೂ ಆರ್ಥಿಕ ಸ್ವಾತಂತ್ರ್ಯ ಎಂಬುದು ಮಹಿಳೆಯ ಬದುಕಿಗೆ ಒಂದು ಅಂಶವೇ ಹೊರತು, ಅದಕ್ಕೆ ಅನ್ಯ

ಅರ್ಥವನ್ನು ಕಲ್ಪಿಸಿ ಆಕೆಯ ಸರ್ವತೋಮುಖ. ಬೆಳವಣಿಗೆಯ ಬದುಕಿಗೆ ಕಡಿವಾಣ ಹಾಕುವಂತಹ, ಒಂದು ರೀತಿಯ, ಸಂಕುಚಿತವಾದ ಅರ್ಥ ಕಲ್ಪಿಸಬಾರದು. ಆಕೆ ತನ್ನ ಇಚ್ಛಾನುಸಾರ ಜವಾಬ್ದಾರಿಯುತವಾಗಿ ಬದುಕುವುದರ ಮೂಲಕ ಸ್ವಾತಂತ್ರ್ಯವನ್ನು ಅನುಭವಿಸಬೇಕಾಗಿದೆ.

ದೈನಂದಿನ ಬದುಕಿನಲ್ಲಿ ಅವರು ಅನೇಕ ರೀತಿಯ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅಂದರೆ ಇಂದು ದುಡಿಯುವ ಮಹಿಳೆ, ಹಾಗೆಂದರೆ ಬರೇ ಸಂಬಳ ತರುವ ಕೆಲಸವೆಂದರ್ಥವಲ್ಲ. ಗ್ರಾಮೀಣ ಪ್ರದೇಶದಲ್ಲೂ ಅನೇಕ ರೀತಿಯಲ್ಲಿ ದುಡಿದು ಸಂಪಾದಿಸುವ ಮಹಿಳೆ ಇವರಿಬ್ಬರೂ ತಮ್ಮ ಬದುಕಿನಲ್ಲಿ ಹಲವಾರು ರೀತಿಯ (ಮನೆಯ ಒಳಗೂ ಮತ್ತು ಹೊರಗೂ) ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತವೆ.

ಈ ಎಲ್ಲಾ ಜವಾಬ್ದಾರಿಗಳು ಮಹಿಳೆಯರ ಪಾಲಿಗೆ ಅಗೋಚರವಾಗಿ ಅಥವಾ ಗೌಣವಾಗಿ ಉಳಿಯುತ್ತವೆ. ಇದರ ಬಗ್ಗೆ ಪುರುಷರು ಹೆಚ್ಚು ತಲೆ ಕೆಡಿಸಿಕೊಳ್ಳಲು ಹೋಗುವುದಿಲ್ಲ. ಅಲ್ಲದೆ ಕುಟುಂಬಗಳಲ್ಲಿ 'ಹಣ ಮತ್ತು ದುಡಿಮೆ' ಇವುಗಳ ಮಧ್ಯೆ ಹೊಂದಾಣಿಕೆ ಸಾಧ್ಯವಿಲ್ಲದಾದಾಗ ಗಂಡ-ಹೆಂಡತಿ ಮಧ್ಯೆ ಅಥವಾ ಕುಟುಂಬದ ಇತರ ಸದಸ್ಯರುಗಳ ಮಧ್ಯೆ ಬಿರುಕಿನ ವಾತಾವರಣ, ದಿನನಿತ್ಯ ಜಗಳ, ಹೀಗೆ ಒಂದಿಲ್ಲೊಂದು ಕಾರಣಗಳಿಂದಾಗಿ ಹೊಂದಾಣಿಕೆ ಬರುವುದಿಲ್ಲ. ಅದರಲ್ಲೂ ಮಹಿಳೆ-ಮಹಿಳೆಯರ ನಡುವೆ ಬಿರುಕು ಅತ್ಯಂತ ಬೇಗ ಕಂಡುಬರುತ್ತದೆ. ಆದರೆ ಪುರುಷರು ಇದಕ್ಕೆ ಹೊರತೆಂದಲ್ಲ. ಅವರಲ್ಲೂ ಸಹಜವಾಗಿ ಇಂತಹ ಕಾದಾಟಗಳು ಇರುತ್ತವೆ. ಇಂತಹ ವಿಚಿತ್ರವಾದ ಸಾಮಾಜಿಕ ಸನ್ನಿವೇಶದಲ್ಲಿ ಮಹಿಳೆಯರು ಬದುಕಬೇಕಾಗಿದೆ.

ಇಂದೂ ಕೂಡ ನಃ ಸ್ತ್ರೀ ಸ್ವಾತಂತ್ರ್ಯಮರ್ಹತಿ ಎಂಬಂತಹ ಮನುವಿನ ಮೂಲ ಮಂತ್ರಕ್ಕೆ ಅಂಟಿಕೊಂಡಿರುವರೆಷ್ಟೋ ಮಂದಿ ಕುಟುಂಬದಲ್ಲಿ, ಸಮಾಜದಲ್ಲಿ ನಮಗೆ ಕಾಣಸಿಗುತ್ತಾರೆ. ಅವರ ದೌರ್ಜನ್ಯ, ದಬ್ಬಾಳಿಕೆಗಳ ಪ್ರತಿರೂಪವೇ ವಿಚ್ಛೇದನ (Divorce) ಆತ್ಮಹತ್ಯೆ (Suicide) ಮತ್ತು ವರದಕ್ಷಿಣೆ ಸಾವು (Dowry deaths)ಇಂತಹ ಪ್ರಕರಣಗಳು ಸಮಾಜದಲ್ಲಿ ಇನ್ನೂ ಮಹಿಳೆಯರನ್ನು ಅಧೋಗತಿಗೆ ತಳ್ಳುತ್ತಿವೆ.

ಇದಕ್ಕೆ ವಿರುದ್ಧ ಸಿಡಿದೆದ್ದವರಿಗೆ ಅನೇಕ ರೀತಿಯಲ್ಲಿ, ಕುಟುಂಬದ ಅಥವಾ ಸಮಾಜದ ದೃಷ್ಟಿಯಲ್ಲಿ ಕುಟುಂಬವನ್ನು ಒಡೆಯುವವರು, ಬಾಯಿಜೋರು, ಗಯ್ಯಾಳಿಗಳು ಎಂಬಂತಹ ಹಣೆ ಪಟ್ಟಿಯನ್ನೇ ಕಟ್ಟಿಬಿಡುತ್ತಾರೆ. ಒಂದು ರೀತಿಯಲ್ಲಿ ಮಹಿಳೆಯರು ಅವರ ಹಕ್ಕುಗಳಿಗಾಗಿ ಹೋರಾಟ ಮಾಡುವುದೇ ತಪ್ಪು ಎನ್ನುವಂತೆ ಭಾವಿಸಿ ಇಂತಹವರ ಬಗೆಗಿನ ಸ್ಥಾನಮಾನದ ಪರಿಕಲ್ಪನೆಯೇ ಬೇರೆಯಾಗಿ ಬಿಡುತ್ತದೆ.

ಆರ್ಥಿಕ ಸ್ವಾವಲಂಬನೆಗೆ ಅಥವಾ ಆರ್ಥಿಕ ಕ್ಷೇತ್ರವು ಮಹಿಳೆಯ ಸಂಪೂರ್ಣ ಶ್ರಮವನ್ನು ತೊಡಗಿಸಿಕೊಳ್ಳುವಷ್ಟು ವಿಶಾಲವಾಗಿದೆ. ದಿನನಿತ್ಯ ಒಬ್ಬ ಮಹಿಳೆಯ ದಿನಚರಿ ನೋಡಿದಾಗ ಆಕೆ ಬೆಳಗಿನ ಜಾವ 4-5 ಗಂಟೆಗೆ ಎದ್ದರೆ, ರಾತ್ರಿ ಮಲಗುವವರೆಗೂ ಯಂತ್ರದಂತೆ ಆಕೆ ದುಡಿಯುತ್ತಿರುತ್ತಾಳೆ. ಅದರಲ್ಲೂ ಬಡಕುಟುಂಬಗಳಲ್ಲಿ ಅವರ ಶ್ರಮ ಅತ್ಯಂತ ಸಂಪೂರ್ಣ ಬಳಕೆಯಾಗುವುದು. ಹೀಗೆ ಇಡೀ ದಿನ 'ದುಡಿಮೆ' ಅವಳ ಬೆನ್ನು ಕಟ್ಟಿರುತ್ತದೆ. ಇದು ಹೊರಗೆ ದುಡಿಯುವ ಮಹಿಳೆಯರಿಗೆ ಒಂದು ತರಹವಿದ್ದರೆ, ಮನೆಯ ಒಳಗೆ ದುಡಿಯುವ ಮಹಿಳೆಯರ ಪಾಲಿಗೆ ಮತ್ತೊಂದು ರೀತಿಯ ಜವಾಬ್ದಾರಿಗಳನ್ನು ಹೇರುತ್ತವೆ. ಪುರುಷ ಪ್ರಧಾನ ಸಮಾಜದಲ್ಲಿ ಕೆಲಸದ ವರ್ಗೀಕರಣ- ಅಂದರೆ ಲೈಂಗಿಕ ಆಧಾರಿತ ಕೆಲಸಗಳ ಮೂಲಕ ಮಹಿಳೆ ಇನ್ನೂ ಹೆಚ್ಚಿನ ಜವಾಬ್ದಾರಿಗಳನ್ನು ಹೊತ್ತುಕೊಳ್ಳಬೇಕಾದ ಸಂದರ್ಭಗಳೇ ಹೆಚ್ಚು.

ಇಂತಹ ಹತ್ತು ಹಲವು ಮಹಿಳಾ ಪರ ವಿಚಾರಗಳನ್ನು ಮಾತನಾಡುವಾಗ, ಇವರೆಲ್ಲರೂ ಪುರುಷ ದ್ವೇಷಿಗಳೆಂದು ತೀರ್ಮಾನಿಸುವ ಗಂಡಸರೂ ಕೂಡ ಇಲ್ಲದಿಲ್ಲ. ಹೀಗಿರುವುದರಿಂದಲೇ ಇಂದಿನ ಸಮಾಜದಲ್ಲಿ ಸಮಾನತೆ ಸ್ವಾತಂತ್ರ್ಯ, ಸ್ವಾವಲಂಬನೆಗಳು ಮಹಿಳೆಯರ ಪಾಲಿಗೆ ಇನ್ನು ಮರೀಚಿಕೆಯಾಗಿಯೇ ಉಳಿದಿವೆ.

ಆರ್ಥಿಕ ಸ್ವಾವಲಂಬನೆಯ ಮೂಲಕ ಸಮಾನತೆಯನ್ನು ಸಾಧಿಸಲಿಕ್ಕಾಗಿಯೇ ಇದು ಸರ್ಕಾರವು ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿರುವುದು, ಯೋಜನೆಗಳನ್ನು ರೂಪಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇಂದು ಮಹಿಳೆಯರು ಸ್ವಾವಲಂಬನೆಯ ಬದುಕಿನತ್ತ, ಸಂವಾದನೆಯತ್ತ, ಎಂತಹ ಅವಿದ್ಯಾವಂತ ಮಹಿಳೆಯರೂ ಕೂಡ ಯೋಚಿಸುವಂತಾಗಿದೆ.

ಸ್ವಾವಲಂಬನೆಯಿಂದಾಗಿ ಬದುಕಿನಲ್ಲಿ ಸಂತೋಷವನ್ನು ಕಂಡುಕೊಂಡು ಬದುಕನ್ನು ರೂಪಿಸಿಕೊಂಡ ಹಲವಾರು ಮಹಿಳೆಯರು ಇದ್ದಾರೆ. ಉದಾಹರಣೆಗೆ, ಸುಜಾತ ಈಕೆಯ ವಯಸ್ಸು ೨೭ ಹೆಚ್ಚೆಂದರೆ ೨೮ ವರ್ಷವಿರಬಹುದು. ಮೂರು ಗಂಡು ಮಕ್ಕಳು ಇಬ್ಬರು ಶಾಲೆಗೆ ಹೋಗುತ್ತಾರೆ. ಕೊನೆಯವನು ಶಿಶುವಿಹಾರಕ್ಕೆ ಹೋಗುತ್ತಾನೆ. ಈ ವಯಸ್ಸಿಗೆ ಈಕೆ ವಿಧವೆ. ಗಂಡ ಬಾಡಿಗೆ ಆಟೋದಿಂದ ದುಡಿದು ಸಂಪಾದಿಸಿ, ಜೀವನ ನಡೆಸುತ್ತಿದ್ದರು. ಸಂಪಾದನೆ ಸಾಲದೆ ಸಾಲ ಮಾಡಿದ, ಕೊನೆಗೆ ಸಾಲ ತೀರಿಸಲಾರದೆ, ಮನೆಯಲ್ಲೇ ಆತ್ಮಹತ್ಯೆ ಮಾಡಿಕೊಂಡು ಸತ್ತ. ಆ ಸಮಯದಲ್ಲಿ ಹೆಂಡತಿ (ಸುಜಾತ) ೧ ತಿಂಗಳ ಬಾಣಂತಿ, ಜೀವನಕ್ಕೆ ಏನು ಮಾಡಬೇಕು, ಹೊರಗೆ ಹೋಗುವ ಹಾಗಿಲ್ಲ. ಸರಿ ನೆರೆಹೊರೆಯವರಿಂದ ಸಹಾಯಪಡೆದು ಒಂದು ಹಸು ಕೊಂಡು ತಂದು, ಅದರಿಂದ ಹಾಲು ಮಾರಿ ಹಣ ಸಂಪಾದಿಸಿ, ಅದರಿಂದ ಜೀವನ ನಿರ್ವಹಿಸುವ ಹೊಣೆ ಈಕೆಯದಾಯಿತು. ತನ್ನ ಮೂರೂ ಮಕ್ಕಳನ್ನು ಓದಿಸಬೇಕೆಂಬುದು ಈಕೆಯ ಉದ್ದೇಶ. ಇಂದು ಸ್ವಾವಲಂಬಿಯಾಗಿ ಯಾರ ಹಂಗೂ ಇಲ್ಲದೆ ಅನಕ್ಷರಸ್ಥಳಾದರೂ ಸಂತೋಷವಾಗಿ ಜೀವನ ನಡೆಸುತ್ತಿದ್ದಾರೆ.

ಮತ್ತೊಬ್ಬಾಕೆ - ಈಕೆಗೆ ಮೂರು ಮಕ್ಕಳು. ಇಬ್ಬರು ಹೆಣ್ಣುಮಕ್ಕಳು, ೧ ಗಂಡುಮಗು. ದೊಡ್ಡವಳಿಗೆ ೧೪ ವರ್ಷ ಈಕೆ ಅಂಗವಿಕಲೆ. ಇನಿಬ್ಬರು ಮಕ್ಕಳು ಚೆನ್ನಾಗಿದ್ದಾರೆ. ಈಕೆ ದಿನಾಲೂ ಸೊಪ್ಪು ಮಾರಿ ಹಣ ಸಂಪಾದಿಸಿ ಜೀವನ ನಡೆಸುವ ಈಕೆ, ಬೆಳಗ್ಗೆ ೬ ಗಂಟೆಗೆ ಮುಂಚೆ ಎದ್ದು ಮಕ್ಕಳಿಗೆ ಅಡುಗೆ ಮಾಡಿಟ್ಟು ಸೊಪ್ಪು ಮಾರಲು ಹೊರಡುತ್ತಾಳೆ. ದಿನಕ್ಕೆ ಈಕೆಯ ಆದಾಯ ೫೦ ರಿಂದ ೭೦ ರೂ.ಗಳು. ತನ್ನ ಸ್ವಾವಲಂಬನೆಯಿಂದಾಗಿ, ಗಂಡನ ಸಂಪಾದನೆ ಜೊತೆಗೂಡಿಸಿ, ತಾನು ಸಂಸಾರದಲ್ಲಿ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾಳೆ. ಅಂಗವಿಕಲ ಮಗಳ ಬಗ್ಗೆ ಯೋಚನೆ. ಅವಳನ್ನು ವಿದ್ಯಾವಂತಳನ್ನಾಗಿ ಮಾಡಿದರೆ ಮಾತ್ರ ಅವಳು ಯಾರ ಹಂಗೂ ಇಲ್ಲದೆ ಬದುಕಲು ಸಾಧ್ಯ ಎಂಬ ಸತ್ಯವನ್ನು ಅರಿತ ಈಕೆ, ಅವಳಿಗೊಂದು ಸ್ವಉದ್ಯೋಗ (ಮಗಳಿಗೆ) ಪಡೆದುಕೊಳ್ಳುವಷ್ಟು ವಿದ್ಯಾಭ್ಯಾಸ ಮಾಡಿದರೂ ಸಾಕು, ಅದೇ ನನ್ನ ಯೋಚನೆಯೆನ್ನುತ್ತಾಳೆ. ಇಲ್ಲದಿದ್ದರೆ, ಬೇರೆಯವರಿಗೆ ಹೊರೆಯಾಗಿ ಎಷ್ಟು ದಿನ ಬದುಕಲು ಸಾಧ್ಯ ಎಂದು ಹೇಳುವ ಈಕೆ ಅವಿದ್ಯಾವಂತೆ. ಆದರೂ ಬದುಕಿನಲ್ಲಿ ಹಲವು ರೀತಿಯ ಕಷ್ಟಗಳನ್ನನುಭವಿಸಿ ಅದರಿಂದ ಪಾಠ ಕಲಿತು ಸ್ವಾವಲಂಬನೆಯು ಬದುಕಿನಲ್ಲಿ ಎಷ್ಟು ಆವಶ್ಯಕ ಎಂಬುದನ್ನು ಅನುಭವದ ಮೂಲಕ ತಿಳಿದವರು.

ಹೀಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕ ಸ್ವಾವಲಂಬನೆ, ಸ್ವಾತಂತ್ರ್ಯ, ಇವು ಯಾವುದೇ ವ್ಯಕ್ತಿಯಲ್ಲಿ ಅವರ ಬದುಕಿನಲ್ಲಿ, ಆತ್ಮಾಭಿಮಾನವನ್ನು, ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅವಕಾಶವನ್ನು ನೀಡುತ್ತವೆ. ಇಂತಹೆ ಹತ್ತು ಹಲವು ಮಹಿಳೆಯರನ್ನು ನಾವು ನೋಡಿದಾಗ, ವಿದ್ಯಾವಂತ-ಅವಿದ್ಯಾವಂತ ಎನ್ನದೆ ಸಮಾಜದ, ಕುಟುಂಬದ ದೌರ್ಜನ್ಯಗಳಿಗೆ ಒಳಗಾಗಿರುವ ಮಹಿಳೆಯರ ಪಾಲಿಗೆ ಸಮಾಜದ ತುಳಿತಕ್ಕೆ ಒಳಗಾಗಿರುವ ಮಹಿಳೆಯರ ಭವಿಷ್ಯ ರೂಪಿಸಿಕೊಳ್ಳಲು ಆರ್ಥಿಕ ಸ್ವಾವಲಂಬನೆಯು ಅತ್ಯಂತ ಮುಖ್ಯವಾದುದು.

ಡಾ. ಎಸ್. ಎಂ. ಮಂಗಳ, ಮೈಸೂರು

ಅಣ್ವಸ್ತ್ರಗಳ ಪ್ರಸರಣಕ್ಕೆ ತಡೆ ಹಾಕಲು ಅಮೇರಿಕ ಇತರ ದೇಶಗಳ ಮೇಲೆ ಒತ್ತಡ ಹೇರುತ್ತಿರುವುದು ನಾವೆಲ್ಲ ಪತ್ರಿಕೆಗಳಲ್ಲಿ ಓದಿದ ವಿಷಯ. ಆದರೆ ಅದೇ ಅಮೇರಿಕದ ಬಳಿ ಮಾತ್ರ ಲೇಸರ್ ಅಸ್ತ್ರಗಳಿವೆ. ಈ ಅಸ್ತ್ರಗಳನ್ನು ಬಳಸಿದರೆ ವಿರೋಧಿಗಳ ಕಣ್ಣು ಕುರುಡಾಗುತ್ತದೆ. ಈ ಬಗ್ಗೆ ಸುಳಿವರಿತ ಅಂತರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆ ಹಲವಾರು ತಿಂಗಳುಗಳಿಂದ ಅಮೇರಿಕದ ಮೇಲೆ ಈ ಅಸ್ತ್ರ ನಿಯಂತ್ರಣಕ್ಕಾಗಿ ಒತ್ತಡ ಹೇರುತ್ತಾ ಬಂದಿದೆ. ಇಲ್ಲಿಯವರೆಗೂ ತನ್ನ ಬಳಿ ಅಂಥಹ ಅಸ್ತ್ರವಾವುದು ಇಲ್ಲ ಎನ್ನುತ್ತಿದ್ದ ಅಮೇರಿಕ, ಈಗ ಲೇಸರ್ ಅಸ್ತ್ರ ತನ್ನ ಬಳಿ ಇರುವುದನ್ನು ಒಪ್ಪಿಕೊಂಡಿದೆ. ಇದು ಅಮೇರಿಕಾದ ಬಿಗ್‌ಬಾಸ್‌ತನಕ್ಕೆ ಹಿಡಿದ ಕನ್ನಡಿ.

ವರದಕ್ಷಿಣೆ ಸಾವುಗಳು - ಸತ್ಯ ಶೋಧನಾ ವಿಚಾರಣೆ

ಆಗಸ್ಟ್ ೧೫ ದೆಹಲಿಯ ಕೆಂಪು ಕೋಟೆಯ ಮೇಲೆ ನಮ್ಮ ಹೆಮ್ಮೆಯ ರಾಷ್ಟ್ರಧ್ವಜ 'ಸ್ವಾತಂತ್ರ್ಯದ' ಸಂಕೇತದಿಂದ ಹಾರುತ್ತಿರುವ ಸಂದರ್ಭದಲ್ಲಿ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ ಸೀಮೆಎಣ್ಣೆಯಿಂದ ಅರೆಬೆಂದ ನವವಿವಾಹಿತೆಯು ಕೊನೆಯುಸಿರೆಳೆಯುತ್ತಿದ್ದಳು. ಅವಳ ಕೊನೆಯುಸಿರಿನಲ್ಲಿದ್ದ ಆಕ್ರಂದನ, ಯಾರನ್ನು ತಟ್ಟಲಿಲ್ಲ. ಮಾನವೀಯತೆಯ ಸೆಲೆಯೇ ಬತ್ತಿಹೋದಂತೆ ಇಂತಹ ಸಾವಿನ ಪ್ರಕರಣಗಳು ದೈನಂದಿನ ಸಹಜ ಘಟನೆಗಳಾಗಿಬಿಡುತ್ತಿವೆ. ವಿವಾಹಿತ ಮಹಿಳೆಯರ ಅಸಹಜ ಸಾವಿನ ಹಿಂದಿರುವ ಅಮಾನುಷ ಹಿಂಸೆ, ಕ್ರೌರ್ಯ, ತನಿಖೆಯಲ್ಲಿನ ಲೋಪದೋಷ, ಸಂಬಂಧಪಟ್ಟ ಇಲಾಖೆಯ ಬೇಜವಾಬ್ದಾರಿ, ಭ್ರಷ್ಟಾಚಾರ, ಮುಂತಾದವುಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಉದ್ದೇಶದಿಂದ ದಿನಾಂಕ 15-8-99 ರಿಂದ ಮೂರು ದಿನ ಕಾಲ ವಿಮೋಚನಾ ಏರ್ಪಡಿಸಿದ್ದ; ಸತ್ಯ ಶೋಧನಾ ಆಯೋಗದ ವಿಚಾರಣೆಯ ವರದಿಯಿದು.

"ನಿನ್ನ ತಂಗಿಯನ್ನು ಗಂಡನ ಮನೆಯವರೇ ಕೊಲೆ ಮಾಡಿದ್ದಾರೆಂದು ಸಾಬೀತು ಪಡಿಸಲು ನಿನ್ನ ಬಳಿ ಸಾಕ್ಷಿಗಳಿವೆಯೆ?" ವಿಚಾರಣೆ ನಡೆಸುತ್ತಿದ್ದ ನಿವೃತ್ತ ನ್ಯಾಯಾಧೀಶರು ಕೇಳಿದರು.

ಒಂದು ಹೊಲದಲ್ಲಿ ಒಬ್ಬನ ಕೊಲೆಯಾಗಿದೆಯೆಂದರೆ, ಮೊದಲು ಯಾರನ್ನು ಅನುಮಾನ ಪಡುವಿರಿ? ಆತ ನಿವೃತ್ತ ನ್ಯಾಯಾಧೀಶರಿಗೆ ಮರುಪ್ರಶ್ನೆ ಹಾಕಿದ.

"ಆ ಹೊಲದ ಯಜಮಾನನನ್ನು" ನ್ಯಾಯಾಧೀಶರು ಉತ್ತರಿಸಿದರು.

ಹಾಗಾದರೆ ನನ್ನ ತಂಗಿ ಸತ್ತಿರುವ ಸ್ಥಳದ ಯಜಮಾನರನ್ನು ನೀವು ಮೊದಲು ಅನುಮಾನ ಪಡಬೇಕಾಗುತ್ತದೆ."

"ಅದಕ್ಕೆ ಸರಿಯಾದ ಸಾಕ್ಷಿ ಪುರಾವೆಗಳು ಬೇಕಾಗುತ್ತದೆ...."

ನೀವು ಊಟ ಮಾಡುವುದು ನಿಮ್ಮ ಮನೆಯಲ್ಲಿ ನೀವು ಊಟ ಮಾಡಿರುವಿರೋ ಅಥವಾ ಇಲ್ಲವೊ ಎಂದು ನನಗೆ ಹೇಗೆ ಗೊತ್ತಾಗುತ್ತದೆ. ಹಾಗೆ ಹೆಣ್ಣುಮಕ್ಕಳ ಮೇಲೆ ನಾಲ್ಕು ಗೋಡೆಯೊಳಗೆ ನಡೆಯುವ ಕ್ರೂರವಾದ ಹಿಂಸೆಗೆ ಸಾಕ್ಷಿ ಪುರಾವೆಗಳನ್ನು ಒದಗಿಸುವುದು ಹೇಗೆ? ಆತ ಮರುಪ್ರಶ್ನೆಯನ್ನು ಹಾಕಿದ.

ಗುಲ್ಬರ್ಗಾದಿಂದ ಊರುಬಾಯಿಯ ಅಣ್ಣ ಬಸಪ್ಪ್ಯಾಪ್ಪ ಸತ್ಯ ಶೋಧನಾ ಆಯೋಗದ ಸದಸ್ಯರಿಗೆ ಈ ಪ್ರಶ್ನೆಯನ್ನು ಹಾಕಿದ. ನಾಲ್ಕು ಗೋಡೆಯೊಳಗಡೆ ನಡೆಯುವ ಮದುವೆಯಾದ ಹೆಣ್ಣುಮಕ್ಕಳ ಅಮಾನುಷವಾದ ಕೊಲೆಗಳಿಗೆ ನಮ್ಮ ದೇಶದ ನ್ಯಾಯ ವ್ಯವಸ್ಥೆಯೆ ಕುರುಡಾಗಿರುವುದನ್ನು ಲೇವಡಿ ಮಾಡಿದಂತಿತ್ತು.

ಮದುವೆ ಮಾಡಿಕೊಟ್ಟು ಜವಾಬ್ದಾರಿಯನ್ನು ತೀರಿಸಿಕೊಳ್ಳುವ ತರಾತುರಿಯಲ್ಲಿ ಹೆತ್ತ ಮಕ್ಕಳನ್ನೇ ಕಳೆದುಕೊಂಡು ನ್ಯಾಯಕ್ಕಾಗಿ ಅಲೆಯುತ್ತಿರುವ ತಂದೆ, ತಾಯಿ, ಸಂಬಂಧಿಕರ ರೋದನ, ಕರುಳು ಕಿತ್ತುಬರುವಂತಿತ್ತು. ಬರ್ಬರವಾದ ಹಿಂಸೆ, ಕ್ರೌರ್ಯದ ಸ್ವರೂಪವನ್ನು ಸಾರ್ವಜನಿಕರೆದುರು, ಹಾಗೂ ಆಯೋಗದ ಸದಸ್ಯರೆದುರಿಗೆ ತೆರೆದಿಡುವುದರ ಜೊತೆಯಲ್ಲಿ ಸಂಬಂಧಪಟ್ಟ ಇಲಾಖೆಗಳ ಬೇಜವಾಬ್ದಾರಿತನ, ಭ್ರಷ್ಟಾಚಾರ, ತನಿಖೆಯಲ್ಲಿನ ವಿಳಂಬ, ಮಾಹಿತಿ ಸಂಗ್ರಹದ ಕೊರತೆ, ಕಾನೂನಿನ ಮಿತಿ ಮುಂತಾದ ಸಮಸ್ಯೆಗಳು ಸ್ತ್ರೀಯರನ್ನು ಶೋಷಿಸುವಷ್ಟೇ ಮೌಲ್ಯಗಳಷ್ಟೇ ಬಲಿಷ್ಠವಾದ ಸಮಸ್ಯೆಯ ಇನ್ನೊಂದು ಮುಖವನ್ನು ನೇರವಾಗಿ ಬಿಚ್ಚಿಡಲಾಯಿತು. ಹೆಣ್ಣುಮಕ್ಕಳನ್ನು ಕಳೆದುಕೊಂಡ ಸಂಬಂಧಿಕರು, ಉಮ್ಮಳಿಸಿ ಬಂದ ದುಃಖದ ನಡುವೆಯೆ ನ್ಯಾಯಕ್ಕಾಗಿ ಮನವಿ ಮಾಡಿಕೊಂಡರು. ಮೂರು ದಿನದ ಈ ವಿಚಾರಣೆಯಲ್ಲಿ ಆಯೋಗವು ಕೈಗೆತ್ತಿಕೊಂಡಿತು.

ಊರುಬಾಯಿಗೆ ಕೇವಲ ಹತ್ತೊಂಬತ್ತು ವರ್ಷ. ಮದುವೆಯಾಗಿ ಮೂರು ವರ್ಷದಲ್ಲಿ ಸತ್ತು ಹೋದಳು. ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವಿಲ್ಲ, ಕೊಲೆಯೆಂದು ದೂರು ನೀಡಿದ್ದರೂ, ಆರೋಪಿಯನ್ನು ಬಿಡುಗಡೆ ಮಾಡಲಾಯಿತು. ಸರ್ಕಾರಿ ವಕೀಲರು ತೋರಿದ ನಿರ್ಲಕ್ಷ್ಯದಿಂದಾಗಿ, ಕೇಸು ಬಿದ್ದುಹೋಯಿತು. ಊರುಬಾಯಿಯನ್ನು ಕೊಲೆ ಮಾಡಿ, ನಂತರ ಅವಳೇ ಆತ್ಮಹತ್ಯೆ ಮಾಡಿಕೊಂಡ ರೀತಿಯಲ್ಲಿ ಅವಳ ದೇಹವನ್ನು ನೇಣುಹಾಕಲಾಯಿತು. ಗಂಡನ ಮನೆಯವರು ಕೊಡುವ ಕಿರುಕುಳವನ್ನು ಸಹಿಸಲಾರದೇ, ಆರು ತಿಂಗಳುಗಳ ಕಾಲ ತವರು ಮನೆಗೆ ಕರೆದುಕೊಂಡು ಬರಲಾಯಿತು. ಆಕೆಯನ್ನು ಪುನಃ ಗಂಡನ ಮನೆಗೆ ಕರೆದುಕೊಂಡು ಹೋದ ಐದು ದಿನಗಳಲ್ಲಿಯೇ ಆಕೆಯನ್ನು ಕೊಲೆ ಮಾಡಲಾಗಿದೆ. ಆರೋಪದಿಂದ ಮುಕ್ತವಾಗಿ ಹೊರಬಂದ

ಆಕೆಯ ಗಂಡ, ಸನ್ಯಾಸಿಯಾಗಿ ಜನರ ಅನುಕಂಪವನ್ನು ಗಳಿಸುತ್ತಾ, ಯಾರು ಅವನ ವಿರುದ್ಧ ಸಾಕ್ಷಿ ಹೇಳದಂತಹ ವಾತಾವರಣವನ್ನು ಸೃಷ್ಟಿ ಮಾಡಿದ್ದಾನೆ.

ಸಲೀಮಳಿಗೆ ಮದುವೆಯಾಗಿ ಆರು ತಿಂಗಳಾಗಿತ್ತು ಮದುವೆಯಾದ ದಿನದಿಂದ ಐದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬರಲು ಗಂಡ ಮನೆಯವರು ಅಮಾನುಷವಾದ ಹಿಂಸೆಯನ್ನು ನೀಡುತ್ತಿದ್ದರು. ತಂದೆ-ತಾಯಿಯವರಿಗೆ ವಿಷಯ ತಿಳಿಸಿದ ನಂತರ, ಹಣವನ್ನು ಹೊಂದಿಸಿ ಕೊಡುವುದಾಗಿ ಭರವಸೆ ನೀಡಿ ಮಗಳನ್ನು ವಾಪಸ್ಸು ಕಳಿಸಿದ್ದರು. ಇದ್ದಕ್ಕಿದ್ದಂತೆ ಮಗಳು ಹಾರ್ಟ್‌ಅಟ್ಯಾಕ್ ಆಗಿ ಸತ್ತು ಹೋಗಿದ್ದಾಳೆಂದು ವಿಷಯ ತಿಳಿಯಿತು. ಹುಡುಗಿಯನ್ನು ಮಣ್ಣು ಮಾಡಿ ೯ ದಿನಗಳ ನಂತರ ಕಾರ್ಯಕ್ಕೆ ಅವರ ಊರಿಗೆ ಹೋದಾಗ ಸಲೀಮಾ ಸತ್ತಿರುವುದು ಹಾರ್ಟಅಟ್ಯಾಕ್‌ನಿಂದ ಅಲ್ಲ, ಹೊಡೆದು ಸಾಯಿಸಿರುವುದು ಎಂದು ಊರಿನ ಕೆಲವರು ಹೇಳಿದಾಗ ಪೊಲೀಸ್‌ಗೆ ದೂರು ನೀಡಲಾಯಿತು. ಸಲೀಮಾ ಸತ್ತು ೨೨ ದಿನದ ನಂತರ ಆಕೆಯ ಶವವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆ ಮಾಡಲಾಯಿತು. ಒಮ್ಮೆ ಹೂಳಿದ ಹೆಣವನ್ನು ಪುನಃ ತೆಗೆದು ಅಲ್ಲೆ ಹೂಳಲು ಗ್ರಾಮದ ಸಲೀಮಳ ಜನಾಂಗದವರು ತಗಾದೆ ತೆಗೆದುದರಿಂದ, ಆಕೆಯ ಶವವನ್ನು ಅವಳ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಶವಸಂಸ್ಕಾರ ಮಾಡಲಾಯಿತು. ಮರಣೋತ್ತರ ಪರೀಕ್ಷೆಯ ವರದಿ, ತನಿಖೆಯ ವಿವರ, ಬಿಡುಗಡೆ ಮಾಡಲು ನೆರವಾದ ಅಂಶ, ಯಾವುದೇ ವಿವರಗಳು ಸಂಬಂಧಪಟ್ಟವರಿಗೆ ತಿಳಿದಿಲ್ಲ.

ಧಾರವಾಡದ ಪ್ರಭಾವತಿಗೆ ಮದುವೆಯಾಗಿ ಕೇವಲ ನಾಲ್ಕು ವರ್ಷವಾಗಿತ್ತು. ಒಂದು ಮಗುವಿನ ತಾಯಿಯಾಗಿದ್ದ ಆಕೆ ಪುನಃ ಗರ್ಭಿಣಿಯಾಗಿದ್ದಳು. ೪ ಲಕ್ಷ ವರದಕ್ಷಿಣೆಯನ್ನು ತರಬೇಕೆಂದು ಆಕೆಯ ಗಂಡನ ಮನೆಯವರು ಆಕೆಯನ್ನು ಕಬ್ಬಿಣದ ಸಲಾಕೆ ಯಿಂದ ಹೊಡೆಯುತ್ತಿದ್ದರು. ಹೀಗೆ ಹೊಡೆಯುತ್ತಿದ್ದಾಗಲೆಲ್ಲಾ ಏಟುಗಳನ್ನು ತಪ್ಪಿಸಿಕೊಳ್ಳಲು ಆಕೆ ಮಗುವನ್ನು ತಬ್ಬಿ ಕೊಳ್ಳುತ್ತಿದ್ದಳು. ಒಮ್ಮೆ ಅವಳಿಗೆ ಬೀಳಬೇಕಾದ ಏಟು ಮಗುವಿಗೆ ಬಿದ್ದು, ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗಲೇ ದಾರಿಯಲ್ಲಿ ಸತ್ತುಹೋಯಿತು. ವಾಪಸ್ಸು ಮನೆಗೆ ಬಂದವರು, ಆ ಮಗುವಿನೊಂದಿಗೆ ಪ್ರಭಾವತಿಯನ್ನು ಬಲಾತ್ಕಾರವಾಗಿ ಬಾವಿಗೆ ನೂಕಿದರು.

ಗಂಡನ ಮನೆಯವರು ಪ್ರಭಾವಶಾಲಿಗಳು, ಗುಂಡಾಗಳಿಂದ ಹೆದರಿಸಿದರು. ದುಡ್ಡಿರುವವರಾದುದರಿಂದ, ಪೊಲೀಸಿನವರು ಪ್ರಭಾವತಿ ಮಗುವಿನೊಂದಿಗೆ ಆತ್ಮಹತ್ಯೆ ಮಾಡಿಕೊಂಡಳೆಂದು ದಾಖಲಿಸಿಕೊಂಡರು.

ರಾಜೇಶ್ವರಿಗೆ ಮದುವೆಯಾಗಿ ಒಂದು ವರ್ಷ ಕಳೆದಿರಲಿಲ್ಲ. ವರದಕ್ಷಿಣೆಯನ್ನು ತೆಗೆದುಕೊಂಡು ಬರಲು ಒತ್ತಾಯಿಸಿ ಗಂಡನ ಮನೆಯಲ್ಲಿ ನೀಡುತ್ತಿದ್ದ ಹಿಂಸೆಯಿಂದಾಗಿ ಪುಟಬಾಲ್ ಒದ್ದಹಾಗೆ ಗಂಡನ ಮನೆಯಲ್ಲಿ ಎರಡುದಿನ, ತವರು ಮನೆಯಲ್ಲಿ ಎರಡುದಿನ ಕಳೆಯುತ್ತಿದ್ದಳು. ತಂದೆ ಹೇಗೋ ಮಾಡಿ ೪೦ ಸಾವಿರ ರೂ.ಗಳನ್ನು ಹೊಂದಿಸಿ ಕೊಟ್ಟರು. ಐದು ವರ್ಷ ಕಳೆಯಿತು. ಒಂದು ದಿನ ಆಕೆಯನ್ನು ಸೀಮೆಎಣ್ಣೆ ಹಾಕಿ ಸುಟ್ಟುಬಿಟ್ಟರು. ಆಸ್ಪತ್ರೆಯಲ್ಲಿ ನಾನು ಹೇಳುವ ಹಾಗೆ ನೀನು ಹೇಳಿಕೆ ನೀಡುವುದಾದರೆ ಆಸ್ಪತ್ರೆಗೆ ಸೇರಿಸುತ್ತೇನೆ ಎಂದು ಗಂಡ ಹೆದರಿಸಿದ. ತರಕಾರಿ ಮಾರುವವ ನೊಬ್ಬ ಅವಳನ್ನು ಆಸ್ಪತ್ರೆಗೆ ಸೇರಿಸಿದ್ದ. ಆತ್ಮಹತ್ಯೆಯಲ್ಲಿ ಕೊಲೆ ಎಂದು ದೂರು ನೀಡಲಾಯಿತಾದರೂ, ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಮಹಿಳೆಯರು			
ಆತ್ಮಹತ್ಯೆ ವಿಧಾನ	೧೯೯೭	೧೯೯೮	೧೯೯೯
ಬಾವಿಗೆ ಬಿದ್ದು	೧೯	೩೪	೯
ನೇಣುಹಾಕಿಕೊಂಡು	೧೦೮	೧೨೧	೮೫
ವಿಷ ಕುಡಿದು	೯೯	೧೩೬	೬೦
ಸುಟ್ಟುಕೊಂಡು	೨೨೪	೩೧೮	೨೧೬
ಇತರೆ ಕಾರಣ	೯೬	೧೧೪	೭೧
ಒಟ್ಟು	೫೪೬	೭೨೩	೪೪೧

* ೧೯೯೯ ಜೂನ್‌ವರೆಗೆ ಕೃಪೆ-ಫ್ರಾಂಟ್‌ಲೈನ್

ಫ್ಲೆವಿಯಾ ಅಗ್ನೇಸ್, ಬೃಂದಾಕಾರತ್, ಮದುಕೇಶ್ವರ್, ಕಾರಿನ್‌ಕುಮಾರ್, ಮಾಧವ ಮೆನನ್, ನಿವೃತ್ತ ನ್ಯಾಯಾಧೀಶ ಸದಾಶಿವಯ್ಯ, ನಿವೃತ್ತ ನ್ಯಾಯಾಧೀಶ ಹೆಚ್. ಸುರೇಶ್, ನ್ಯಾಯಾಧೀಶರಾಗಿದ್ದ ಲೀಲಾ ಸೇಥ್, ಆರ್. ವೆಂಕಟರಮಣಿ, ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಪದ್ಮಾಸೇಥ್‌ರವನ್ನು ಒಳಗೊಂಡ ಆಯೋಗ, ಮೂರು ದಿನಗಳ ಕಾಲ ಸುದೀರ್ಘವಾಗಿ ನಡೆಸಿದ ವಿಚಾರಣೆಯ ಹಿನ್ನೆಲೆಯಲ್ಲಿ ಈ ಕೆಳಕಂಡ ಗಮನಿಸಲೇಬೇಕಾದ ಕೆಲವು ಅಂಶಗಳನ್ನು ಒತ್ತಿಹೇಳಿದೆ.

* ಕಾನೂನುಗಳನ್ನು ಪಾಲಿಸುವಲ್ಲಿ ಕಂಡುಬರುವ ಲೋಪದೋಷ ಹಾಗೂ ಮಿತಿಗಳಿಂದಾಗಿ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ.
* ತನಿಖೆ ನಡೆಸುವ ಅಧಿಕಾರಿ ಎಸೆಗುವ ತಪ್ಪಿನಿಂದಾಗಿ ಬಹಳಷ್ಟು ಕೇಸುಗಳು ಬಿದ್ದುಹೋಗುತ್ತಿವೆ. ಪಂಚನಾಮ ನಡೆಸುವುದರಿಂದ ಹಿಡಿದು ಮರಣೋತ್ತರ ಪರೀಕ್ಷೆಯವರೆಗೆ ಈ ರೀತಿಯ ತಪ್ಪುಗಳು ಹೇಗೆ ಕೇಸುಗಳನ್ನು ದುರ್ಬಲಗೊಳಿಸಿದೆ ಎಂಬುದನ್ನು ವಿಚಾರಣೆ ನಡೆಸಿದ ಮೂರು ದಿನಗಳನ್ನು, ಮಕ್ಕಳನ್ನು ಸೆಳೆದುಕೊಂಡ ಸಂಬಂಧಿಕರು ನೀಡಿದ ವಿವರಣೆಗಳು ಸಾಬೀತು ಪಡಿಸುತ್ತವೆ.
* ಸಾಂಧರ್ಬಿಕ ಸಾಕ್ಷಿಗಳು ಕೇಸುಗಳು ನಿರ್ಣಯಿಸುವ ಪ್ರಮುಖ ಅಂಶಗಳಾಗಿರುತ್ತವೆ. ಕೊನೆಯುಸಿರೆಳೆಯುತ್ತಿರುವ ಕೊನೆಯ ಗಳಿಗೆಯಲ್ಲಿ ತೆಗೆದುಕೊಳ್ಳುವ ಹೇಳಿಕೆಯನ್ನು ಗಂಡನ ಮನೆಯ ಸದಸ್ಯರೆದುರಿನಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಆದುದರಿಂದ ಬಹಳಷ್ಟು ಕೇಸುಗಳಲ್ಲಿ ಸತ್ಯ ಸಂಗತಿ ದಾಖಲಾಗುವುದೇ ಇಲ್ಲ.
* ವಿಚಾರಣೆ ನಡೆಸುವ ಅಧಿಕಾರಿಗಳು ಬಹಳಷ್ಟು ಸಂದರ್ಭಗಳಲ್ಲಿ, ನೊಂದ ತಾಯಿಯರಿಗೆ ನ್ಯಾಯಾಲಯದ ಮೂಲಕ ಹೋರಾಟ ನಡೆಸಲು ಬೆಂಬಲ ನೀಡದೆ, ಆರೋಪಿಯೊಂದಿಗೆ ಒಪ್ಪಂದಕ್ಕೆ ಬರಲು ಒತ್ತಾಯಿಸಲಾಗುತ್ತಿದೆ.
* ಅಧಿಕಾರಿಗಳ ಬೇಜವಾಬ್ದಾರಿತನ, ಹಾಗೂ ವಿಳಂಬದಿಂದಾಗಿ ನೊಂದ ತಂದೆ-ತಾಯಂದಿರು ಅಸಹಾಯಕತೆಯಿಂದ ಬೇಸತ್ತು, ಕೆಲವೊಮ್ಮೆ ಆರೋಪಿಯೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ.
* ಆಯೋಗದವರು ವಿಚಾರಣೆ ನಡೆಸಿದ ಬಹುಪಾಲು ಕೇಸುಗಳಲ್ಲಿ ಸತ್ತ ಹೆಣ್ಣುಮಕ್ಕಳು ೧೯ ವರ್ಷ ವಯಸ್ಸಿನಿಂದ ೩೫ ವರ್ಷ ವಯಸ್ಸಿನೊಳಗಿನ ಹೆಣ್ಣುಮಕ್ಕಳು.
* ಬಹುಪಾಲು ಕೇಸುಗಳನ್ನು ಅಧಿಕಾರಿಗಳು 302 'ಬಿ' ಸೆಕ್ಷನ್ ಅಡಿಯಲ್ಲಿ ಕೇಸನ್ನು ದಾಖಲು ಮಾಡಿಕೊಳ್ಳದೆ, 304 'ಬಿ' ಅಡಿಯಲ್ಲಿ ಮಾಡಿಕೊಳ್ಳುತ್ತಾರೆ.
* ವರದಕ್ಷಿಣೆ ಸಂಬಂಧಪಟ್ಟ ಹಿಂಸೆಯ ಪ್ರಮಾಣ ತೀವ್ರಗತಿಯಲ್ಲಿ ಹೆಚ್ಚುತ್ತಿದೆ.

೨೩ ವರ್ಷ ವಯಸ್ಸಿನ ಗೀತಾ ಬಿ-ಫಾರ್ಮಾ ಮುಗಿಸಿ ಕೆಲಸಕ್ಕೆ ಹೋಗುತ್ತಿದ್ದಳು. ಮದುವೆಯಾದ ನಂತರ ಕೆಲಸ ಬಿಟ್ಟಳು. ಸ್ವಾಭಿಮಾನಿಯಾದ ಗೀತಾ, ಸಂಕೋಚ ಸ್ವಭಾವದವಳು. ಒಂದು ದಿನ ದಿಢೀರನೆ ಅವಳು ಸತ್ತುಹೋದಳೆಂದು, ಆಕೆಯ ತಂದೆ-ತಾಯಿಗೆ ವಿಷಯ ತಿಳಿಸಲಾಯಿತು.

ಆಕೆಯ ಗಂಡನ ಮನೆಯಲ್ಲಿ "ನೀನು ವರದಕ್ಷಿಣೆ ತರಲಿಲ್ಲ, ೫೦,೦೦೦ ರೂ. ಕೊಟ್ಟು ಮದುವೆ ಮಾಡಿಕೊಡಲು ಬೇರೆಯವರು ತಯಾರಿದ್ದರು." ಎಂದು ಆಕೆಯನ್ನು ಸದಾ ಹಿಂಸಿಸಿ ಚುಚ್ಚು ಮಾತನಾಡುತ್ತಿದ್ದರು. ತಂದೆ, ತಾಯಿ ಆಕೆ ಸತ್ತ ವಿಷಯ ತಿಳಿದು ದುಃಖಪೂರಿತರಾಗಿ ಮನೆಗೆ ಹೋದಾಗ ಆಕೆಯನ್ನು ಮಂಚದ ಮೇಲೆ ಮಲಗಿಸಲಾಗಿತ್ತು. ಆಕೆ ನೇಣು ಹಾಕಿಕೊಂಡ ಯಾವುದೇ ಸುಳಿವು ಸಿಗಲಿಲ್ಲ. ಅವಳ ಕೆನ್ನೆಯ ಮೇಲೆ ಬೆರಳಿನ ಗುರುತುಗಳು ಕಾಣುತ್ತಿದ್ದವು. ಬಳೆಚೂರುಗಳು ಅಲ್ಲಲ್ಲಿ ಬಿದ್ದಿದ್ದವು. ಪೊಲೀಸರು ಇವರು ಹೋಗುವ ಮೊದಲೇ ಹೇಳಿಕೆಗಳನ್ನು ದಾಖಲು

ಗಂಡನ ಮನೆಯಲ್ಲಿ ನೀಡುವ ಹಿಂಸೆಯನ್ನು ತಡೆಯಲಾರದೆ. ವಾಪಸ್ಸು ಬರುವ ಹೆಣ್ಣುಮಕ್ಕಳನ್ನು ಸಂತೋಷದಿಂದ ಬರಮಾಡಿಕೊಂಡರೆ, ಹೆಣ್ಣುಮಕ್ಕಳು ಖಂಡಿತಾ ಸಾಯುವುದಿಲ್ಲ.

ಮದುಕೇಶ್ವರ್

ಮಾಡಿಕೊಂಡಿದ್ದರು. ನಮ್ಮ ಮಗಳು ಆತ್ಮಹತ್ಯೆ ಮಾಡಿಕೊಂಡಿಲ್ಲ, ಅವಳನ್ನು ಕೊಲೆ ಮಾಡಲಾಗಿದೆಯೆಂದು, ಹೇಳಿದರು ಆತ್ಯಹತ್ಯೆಯೆಂದು ದಾಖಲು ಮಾಡಿಕೊಳ್ಳಲಾಯಿತು. ಪ್ರಥಮ ಮಾಹಿತಿ ವರದಿಯಲ್ಲಿಯು "ನನ್ನ ಮಗಳು ಮಾನಸಿಕವಾಗಿ ದೈಹಿಕವಾಗಿ ನೊಂದಿದ್ದಳು, ಆದುದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು, ತಾಯಿಯು ಹೇಳಿದುದಾಗಿ ದಾಖಲಿಸ ಲಾಗಿದೆ. ಗಂಡ, ರಾತ್ರಿ ಒಂಬತ್ತು ಗಂಟೆಗೆ ತಲೆಬಾಚಿಕೊಳ್ಳಬೇಡ ಎಂದು ಬೈದ, ಅದಕ್ಕೆ ಅವಳು ಆತ್ಯಹತ್ಯೆ ಮಾಡಿಕೊಂಡಿದ್ದಾಳೆಂದು, ಹೇಳಿಕೆ ನೀಡಿದ್ದಾನೆ. ಮರಣೋತ್ತರ ವರದಿಯಲ್ಲಿ ಸಾವಿನ ಕಾರಣವನ್ನು ನಮೂದಿಸಲಾಗಿಲ್ಲ.

ರಾಜಕೀಯ ಪಕ್ಷಗಳು ಸ್ತ್ರೀಯರ ಮೇಲೆ ನಡೆಯುತ್ತಿರುವ ಹಿಂಸೆಯನ್ನು ತಮ್ಮ ರಾಷ್ಟ್ರೀಯ ಅಜೆಂಡಾದಲ್ಲಿ ಚರ್ಚಿಸುತ್ತಿಲ್ಲ.

ಬೃಂದಾ ಕಾರಟ್

✲ ✲ ✲

ಖಾಸಗಿಯಾಗಿ ನಡೆಯುವ ಹಿಂಸೆ, ಸಾರ್ವಜನಿಕವಾಗಿ ನಡೆಯುವ ಹಿಂಸೆಯಷ್ಟೆ ಗಂಭೀರವಾದುದು.

✲ ✲ ✲

ನಮ್ಮ ಹುಡುಗಿಗೆ ಮಾತ್ರವಲ್ಲ, ನೊಂದವರ ಹೆಣ್ಣುಮಕ್ಕಳಿಗೆಲ್ಲಾ ನ್ಯಾಯ ಸಿಗಬೇಕು. ಈ ನ್ಯಾಯ ಸಿಗುವ ಕೆಲಸಕ್ಕೆ ನಾನು ಕೈಗೂಡಿಸುತ್ತೇನೆ.

ಬಸಮ್ಮ, ಪ್ರಭಾವತಿಯ ಸೋದರತ್ತೆ

✲ ✲ ✲

ಸತ್ತ ಹುಡುಗಿಯ ಸಂಬಂಧಿಕರಾಗಿರಬಹುದು ಅಥವಾ ಇಲ್ಲದಿರಬಹುದು, ನಾವು ಸಾಕ್ಷಿ ಹೇಳಲು ಮುಂದೆ ಬರಬೇಕು.

ಬಸವಣ್ಣಪ್ಪ, ಊರುಬಾಯಿಯ ಅಣ್ಣಾ

✲ ✲ ✲

ನಾವು ನಮ್ಮ ಹೆಣ್ಣುಮಕ್ಕಳು ಬರೆದ ಕಾಗದ ಪತ್ರಗಳನ್ನು ಜೋಪಾನವಾಗಿಡಬೇಕು.

ಬಸವಣ್ಣಪ್ಪ, ಊರುಬಾಯಿಯ ಸಹೋದರ

✲ ✲ ✲

ಪ್ರತಿದಿನ ಸದಾ ಐದು ಸುಟ್ಟ ಮಹಿಳೆಯರು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗುತ್ತಾರೆ.

ಇಂದಿರಾಗೆ ಮದುವೆಯಾಗಿ ೫ ವರ್ಷವಾಗಿತ್ತು. ಟಿ.ಸಿ.ಎಚ್. ಮುಗಿಸಿದ್ದ ಆಕೆಯನ್ನು ವಿಜೃಂಭಣೆಯಿಂದ ಸಾಕಷ್ಟು ಖರ್ಚುಮಾಡಿ ಮದುವೆ ಮಾಡಿದ್ದರು. ಮದುವೆಯಾದ ಕೂಡಲೇ ಅತ್ತೆ, ನಾದಿನಿ, ಗಂಡ, ಮೈದುನ ಎಲ್ಲರೂ ಸೇರಿ ಪುನಃ ವರದಕ್ಷಿಣೆಯನ್ನು ತರಲು ಒತ್ತಾಯಿಸುತ್ತಿದ್ದರು. ಮೊದಲನೆಯ ಹೆರಿಗೆಗೆ ತವರು ಮನೆಗೆ ಹೋದಾಗ, ಗಂಡನ ಮನೆಯಲ್ಲಿ ನೀಡುತ್ತಿದ್ದ ಕಿರುಕುಳವನ್ನು ವಿವರಿಸಿ ಹೇಳಿದ್ದಳು. ವಾಪಸ್ಸು ಗಂಡನ ಮನೆಗೆ ಹೋಗುವುದಿಲ್ಲವೆಂದು ಹೇಳುತ್ತಿದ್ದಳು. ಎಲ್ಲಾದರೂ ಕೆಲಸಕ್ಕೆ ಸೇರಿ ಜೀವನ ಮಾಡಬೇಕೆಂಬ ಆಸೆ ಅವಳಲ್ಲಿ ಇತ್ತು. ಆದರೆ ದೊಡ್ಡವರೆಲ್ಲಾ ಸೇರಿ ಅವಳನ್ನು ಒಪ್ಪಿಸಿ ಪುನಃ ಗಂಡನ ಮನೆಗೆ ಕಳಿಸಿದರು. ಮತ್ತೆ ಅದೇ ಕಿರುಕುಳ. ವಾಪಸ್ಸು ತವರುಮನೆಗೆ ಬಂದ ಅವಳನ್ನು ಗಂಡನ ಮನೆಯವರು ಹಿಂಸಿಸಿ, ವಾಪಸ್ಸು ಕರೆದುಕೊಂಡು ಹೋದರು. ಮಗುವಿಗೆ ತುಂಬಾ ಹುಷಾರಿಲ್ಲ ದಂತಾದಾಗ, ಗಂಡನ ಮನೆಯವರು ಚಿಕಿತ್ಸೆ ಮಾಡಿಸಲಿಲ್ಲ. ತವರು ಮನೆಗೆ ವಾಪಸ್ಸು ಬಂದು, ತನ್ನ ಒಡವೆಗಳನ್ನು ಮಾರಿ ಮಗುವನ್ನು ಉಳಿಸಿಕೊಂಡಳು. ಇನ್ನೊಂದು ಮಗುವನ್ನು ಗಂಡನ ಮನೆಯಲ್ಲಿ ಬಿಟ್ಟುಬಂದಿದ್ದರಿಂದ ಪುನಃ ಗಂಡನ ಮನೆಗೆ ಹೋದಳು. "ನಿನ್ನ ಮಿಂಡನ ಮನೆಗೆ ಹೋಗಿ ಒಡವೆಗಳನ್ನು ಅವನಿಗೆ ಕೊಟ್ಟು ಮಗುವಿಗೆ ಖರ್ಚು ಮಾಡಿದೆಯೆಂದು ಸುಳ್ಳು ಹೇಳುತ್ತಿರುವೆಯೆಂದು ಪುನಃ ಹಿಂಸಿಸಿದರು. ಅವಳ ತಂದೆ ಕಟ್ಟಿದ ಮನೆಯಲ್ಲಿ ಅರ್ಧಭಾಗ ಕೇಳೆಂದು ಒತ್ತಾಯಿಸುತ್ತಿದ್ದರು. ಅವಳಿಗೆ ಕೊಡುತ್ತಿದ್ದ ಕಷ್ಟವನ್ನು ವಿವರಿಸಿ ತವರುಮನೆಗೆ ಪತ್ರವನ್ನು ಬರೆದಿದ್ದಳು. ಒಂದು ದಿನ ಆಕೆಯ ಗಂಡನ ಮನೆಯರೆಲ್ಲಾ ಸೇರಿ, ಆಕೆಯ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದರು. ಬೆಂಕಿಯೊಂದಿಗೆ ಹೊರಗೆ ಓಡಿಬಂದ ಆಕೆಗೆ ಯಾರೂ ನೆರವು ನೀಡಲಿಲ್ಲ. ಮನೆಯ ಎಲ್ಲರ ಮೇಲೂ ದೂರು ನೀಡಿದ್ದರೂ ಕೇವಲ ಗಂಡನನ್ನು ಮಾತ್ರ ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಹೆಂಗಸರನ್ನು ಬಂಧಿಸುವ ಹಾಗಿಲ್ಲವೆಂದು, ಅವರನ್ನು ಬಂಧಿಸಲಿಲ್ಲ.

ಊರಿನವರೆಲ್ಲಾ ಒಂದಾಗಿ, ಆಕೆಯ ಗಂಡ ಸತ್ತು ಹೋಗಿದ್ದಾನೆಂದು ಪುಕಾರು ಹೊರಡಿಸಿದರು. ಆದರೆ ಆತ ಸತ್ತಿಲ್ಲ. ಕೇಸು ನಡೆಯುತ್ತಿದೆ.

ಸಾವಿನ ದವಡೆಯಿಂದ ಪಾರಾದವರು

ರೋಜಾವತಿ ಸ್ಕೂಲ್ ಟೀಚರ್ ಆಗಿ ಕೆಲಸ ಮಾಡುತ್ತಿದ್ದಾಳೆ. ಮದುವೆಯಾಗಿ ಎರಡು ತಿಂಗಳಿನಲ್ಲಿ ರೋಜಾವತಿಗೆ ಗಂಡನ ಮನೆಯವರು ಕಿರುಕುಳ ಕೊಡಲು ಪ್ರಾರಂಭಿಸಿದರು. ಅವಳು ಗರ್ಭಿಣಿಯಿದ್ದಾಗ ಅವಳ ಒಡವೆಗಳನ್ನೆಲ್ಲಾ ತೆಗೆದುಕೊಂಡರು. "ನಾನಾ ರೀತಿಯಲ್ಲಿ ಹಿಂಸೆಯನ್ನು ನೀಡುವುದರ ಜೊತೆಯಲ್ಲಿ ಒಮ್ಮೆ ಪೆಟ್ರೋಲ್ ಸುರಿದು ಸುಡಲು ಯತ್ನಿಸಿದರು. ಆದರೆ ಬೆಂಕಿ ಕಡ್ಡಿಗಳು ತಕ್ಷಣ ಅಂಟಿಕೊಳ್ಳದಿದ್ದುದರಿಂದ ನಾನು ಬದುಕುಳಿದೆ. ನನ್ನ ಸರದಿಂದಲೇ ನನ್ನ ಕತ್ತನ್ನು ಬಿಗಿದು ಸಾಯಿಸಲು ಪ್ರಯತ್ನಿಸಿದರು. ಉಸಿರುಕಟ್ಟಿ, ನಾನು ನೋವನ್ನು ತಡೆಯಲಾರದೆ, ಕೂಗಿಕೊಂಡೆ ಕಣ್ಣುಗುಡ್ಡೆಗಳು ತಿರುಗಿದಂತಾಗಿ, ಕುತ್ತಿಗೆಯಲ್ಲಿ ಗುರುತು ಹಾಗೆ ಉಳಿದಿವೆ. ಆಸ್ಪತ್ರೆಗೆ ಸೇರಿಸಿ ತಂದೆ ತಾಯಿಗಳು ನನ್ನನ್ನು ಬದುಕಿಸಿಕೊಂಡರು. ನಾವು ಪೊಲೀಸರಿಗೆ ದೂರು ನೀಡಿದೆವು. ನಮ್ಮ ತಂದೆ ನೀಡಿದ ೩೦ ಸಾವಿರದ ಒಡವೆಗಳನ್ನು ವಾಪಸ್ಸು ನೀಡದೆ ಸತಾಯಿಸುತ್ತಿದ್ದಾರೆ ಎಂದು ಕಣ್ಣೀರಿಡುತ್ತಾ ನುಡಿದಳು.

ಎಸ್.ಎಸ್.ಎಲ್.ಸಿ.ಯನ್ನು ಓದಿದ ಉಮಾಮಹೇಶ್ವರಿಯನ್ನು ೧೦ ಸಾವಿರ ರೂ. ವರದಕ್ಷಿಣೆಯನ್ನು ಕೊಟ್ಟು ಮದುವೆ ಮಾಡಿದರು. ಮೂರು ಜನ ನಾದಿನಿಯರು. ಆಕೆಯ ಗಂಡ ತನ್ನ ಅಕ್ಕಂದಿರು ಹೇಳಿದ ಹಾಗೆ ಹೆಂಡತಿಯು ಕೇಳಬೇಕೆಂದು ಹೇಳುತ್ತಿದ್ದ. ದೀಪಾವಳಿ ಹಬ್ಬಕ್ಕೆ ಮಿಕ್ಸಿಯನ್ನು ತೆಗೆದುಕೊಂಡು ಬಾ ಎಂದು ಕಳಿಸಿದರು. ಮಗಳು ಚೆನ್ನಾಗಿರಲೆಂದು ಹಬ್ಬಕ್ಕೆ ಮಿಕ್ಸಿಯನ್ನು ತೆಗೆದುಕೊಟ್ಟರು. ಆದರೂ ಕಿರುಕುಳ ನೀಡುವುದು ತಪ್ಪಲಿಲ್ಲ. ಸದಾ "ನೀನು ತವರು ಮನೆಗೆ ಹೋಗು ಇಲ್ಲ, ನಿನಗೆ ಡೈವೋರ್ಸ್ ಕೊಡುತ್ತೇನೆ ಎಂದು ಮಾನಸಿಕವಾಗಿ ಹಿಂಸಿಸುತ್ತಿದ್ದರು. ಉಮಾ ತಾಯಿಯ ಮನೆಗೆ ಹೊರಟಿದ್ದಳು. ಪುನಃ ತಾಯಿಯ ಮನೆಗೆ ಹೋಗುವುದು ಸರಿಯಲ್ಲವೆಂದು ವಾಪಸ್ಸು ಬಂದಳು. ಆಕೆ ವಾಪಸ್ಸು ಬಂದುದನ್ನು ನೋಡಿ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ. "ನನ್ನ ಮಗಳು ನನ್ನ ಬಳಿ ಓಡಿಬಂದಳು, ಮಗುವನ್ನು ಕಾಲಲ್ಲಿ ತಳ್ಳಿ ನನಗೆ ಬೆಂಕಿ ಹಚ್ಚಿದ ಗಂಡನನ್ನು ಬಿಗಿಯಾಗಿ ಹಿಡಿದುಕೊಂಡೆ. ಆಗ ನಮ್ಮನ್ನು ಬಿಡಿಸಿ ಆಸ್ಪತ್ರೆಗೆ ಸೇರಿಸಿದರು" ಬಿಕ್ಕಿ ನುಡಿಯುತ್ತಾಳೆ ಉಮಾ. ಅತ್ತೆ ಸ್ಟೌವ್ ಸಿಡಿದು ಬೆಂಕಿ ಹತ್ತಿತ್ತು ಎಂದು ಹೇಳು, ಇಲ್ಲ ನಿನ್ನ ಮಗುವನ್ನು ಕೊಂದು ಹಾಕುತ್ತೇವೆ ಎಂದು ಹೆದರಿಸಿದರು. ಅವರ ಒತ್ತಾಯಕ್ಕೆ ಉಮಾಮಹೇಶ್ವರಿ ಅದೇ ರೀತಿ ಹೇಳಿಕೆಯನ್ನು ನೀಡಿದಳು. ಆಕೆಯ ತಂದೆ ತಾಯಿಯರು ಬಂದು ಒತ್ತಾಯಿಸಿ ಕೇಳಿದಾಗ ನಡೆದುದನ್ನೆಲ್ಲಾ ವಿವರಿಸಿ ಹೇಳಿದಳು. ತಂದೆ ತಾಯಿಯ ಬೆಂಬಲದಿಂದ, ಬೇರೆ ಹೇಳಿಕೆಯನ್ನು ನೀಡಿದಳು. ಆಕೆಯ ಗಂಡನನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಈಗಲೂ ಕೇಸನ್ನು ವಾಪಸ್ಸು ತೆಗೆದುಕೋ, ಇಲ್ಲದಿದ್ದರೆ, ಮಗುವನ್ನು ಉಳಿಸುವುದಿಲ್ಲವೆಂದು ಹೆದರಿಸುತ್ತಾರೆ.

ಮೂರು ದಿನಗಳ ಕಾಲ ನಡೆದ ಈ ವಿಚಾರಣೆ ಸಭಿಕರಲ್ಲಿ ಹಾಗೂ ಆಯೋಗದ ಸದಸ್ಯರಲ್ಲಿ ಉಂಟುಮಾಡಿದ ಭಾವನೆಯನ್ನು ವಿವರಿಸಲು ಅಸದಳವಾದುದು.

- ಜಿ. ವಿ. ವೇದವಲ್ಲಿ, ರಾಜೇಶ್ವರಿ ಎಚ್. ಎಸ್.

ವರದಕ್ಷಿಣೆಯ ಸಾವುಗಳಿಗೆ ರಾಜಕೀಯ ಸ್ವರೂಪ ನೀಡುವ ಉದ್ದೇಶದಿಂದ ಹಮ್ಮಿಕೊಂಡ ಹಲವಾರು ಕಾರ್ಯಕ್ರಮಗಳಲ್ಲಿ, ರಾಜಕೀಯ ವ್ಯಕ್ತಿಗಳ ಗಮನಕ್ಕೆ ತರಲು ವಿಧಾನ ಸೌಧದಲ್ಲಿ ನಡೆಸಿದ ಕಾರ್ಯಕ್ರಮವೂ ಒಂದು. ಪಕ್ಷಾತೀತ ದೃಷ್ಟಿಯಿಂದ ಈ ಸಾವುಗಳನ್ನು ವಿವರವಾಗಿ ಪರಿಶೀಲಿಸಿ ತನ್ನ ಸಲಹೆಯನ್ನು ನೀಡುವ ಉದ್ದೇಶದಿಂದ ಹೌಸ್ ಕಮಿಟಿಯನ್ನು ರಚಿಸುವ ಬೇಡಿಕೆಯನ್ನು ಇಡಲಾಗಿತ್ತು. ಈ ಕಮಿಟಿಯ ಸದಸ್ಯರ ಮುಂದೆ ನೊಂದ ತಂದೆ ತಾಯಂದಿರು, ತಮ್ಮ ಹೆಣ್ಣು ಮಕ್ಕಳನ್ನು ಕಳೆದುಕೊಂಡ ವಿಧಾನ, ತನಿಖೆಯಲ್ಲಿ ನಡೆಯುವ ತಪ್ಪುಗಳು, ಅಧಿಕಾರಿಗಳ ಭ್ರಷ್ಟಾಚಾರ ಮುಂತಾದವುಗಳನ್ನು ನೇರವಾಗಿ ಹೇಳಿಕೊಂಡರು. ಹೌಸ್ ಕಮಿಟಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು.

ಮಹಿಳೆಯರಿಗಾಗಿ ಸತ್ಯದ ಆಯೋಗ

ಕಳೆದ ಎರಡು ವರ್ಷಗಳಿಂದ ನಾವು ಬೆಂಗಳೂರಿನ ಪೊಲೀಸ್ ಇಲಾಖೆಯ ಕೇಂದ್ರ ಅಪರಾಧ ವಿಭಾಗದಿಂದ ವಿವಾಹಿತ ಮಹಿಳೆಯರ ಅಸ್ವಾಭಾವಿಕ ಸಾವುಗಳನ್ನು ಕುರಿತಾದ ಅಂಕಿ ಅಂಶಗಳನ್ನು ಕ್ರಮಬದ್ಧವಾಗಿ ಕಲೆ ಹಾಕುತ್ತಾ ಬಂದಿದ್ದೇವೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಬೆಂಗಳೂರು ನಗರ ಒಂದರಲ್ಲೆ ತಿಂಗಳಿಗೆ ಸರಾಸರಿ ಒಂದು ನೂರು ವಿವಾಹಿತ ಮಹಿಳೆಯರು ಅಸ್ವಾಭಾವಿಕವಾಗಿ ಸಾವನ್ನಪ್ಪುತ್ತಿರುವ ನಗ್ನ ಸತ್ಯ ನಮ್ಮನ್ನು ಆಘಾತಗೊಳಿಸಿದೆ. ಇವುಗಳಲ್ಲಿ ಶೇ. ೭೦ರಷ್ಟು ಪ್ರಕರಣಗಳು ಸ್ಟೌ ಸಿಡಿತ, ಬೆಂಕಿ ಅಪಘಾತ, ಆತ್ಮಹತ್ಯೆ ಇಲ್ಲವೆ ಹೊಟ್ಟೆನೋವು ಇತ್ಯಾದಿ ಕಾರಣಗಳಿಂದ ಸಂಭವಿಸಿವೆ ಎಂದು ಪೊಲೀಸ್ ಕಡತಗಳಲ್ಲಿ ದಾಖಲಾಗಿದೆ. ಅಲ್ಲದೆ ಪ್ರಕರಣಗಳಿಗೆ ತೆರೆ ಎಳೆಯಲಾಗಿದೆ.

ಈ ಕಾರಣಗಳು ಸಂಭವನೀಯ ಎನಿಸಿದರೂ ಈ ಪ್ರಮಾಣದ ಪ್ರಕರಣಗಳು ಅಸಂಭಾವನೀಯ ಎನಿಸಿ ನಾವು ಇಂತಹ ಕೆಲವು ಮುಕ್ತಾಯ ಕಂಡ ಪ್ರಕರಣಗಳ ಮಹಿಳೆಯ ಹೆತ್ತವರನ್ನು, ಪೋಷಕರನ್ನು ಕಂಡು ವಿಚಾರಿಸಿದಾಗ ನಮಗೆ ಮತ್ತೊಂದು ಸತ್ಯದ ದರ್ಶನವಾಯಿತು. ಅಂದರೆ ಆ ನೊಂದವರ ಪ್ರಕಾರ ಅವರ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ಮಾನಸಿಕ ದೈಹಿಕ ಹಿಂಸೆಗಳನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದರು ಇಲ್ಲವೆ ಗಂಡನ ಮನೆಯವರಿಂದಲೆ ಕೊಲೆಯಾಗಿದ್ದರು.

ಇಂತಹ ಅಗೋಚರ ಸತ್ಯಗಳು "ಅಸ್ವಾಭಾವಿಕ ಸಾವುಗಳು" ಎಂಬ ಸಾಮಾನ್ಯ ನಂಬಿಕೆಗಳಿಗೆ ಸವಾಲಾಗಿ ನಿಂತಿವೆ. ಹೀಗಾಗಿ ನಾವು ಕಳೆದ ೨ ವರ್ಷಗಳಲ್ಲಿ ಸಾಕಷ್ಟು ಸ್ಟೌ ಸಿಡಿತ ಎಂದು ಮುಚ್ಚಿಹೋದ ಪ್ರಕರಣಗಳನ್ನು ಮತ್ತೆ ತೆರೆಸಿ ಮರು ತನಿಖೆ ನಡೆಸುವಂತೆ ಪೊಲೀಸ್ ಇಲಾಖೆಯನ್ನು ಒತ್ತಾಯಿಸುವಲ್ಲಿ ಸಫಲರಾಗಿದ್ದೇವೆ.

ವಿಷಾದದ ಸಂಗತಿ ಎಂದರೆ, ಇಂತಹ ಸಾವುಗಳನ್ನು 'ಅಪರಾಧ' ಪ್ರಕರಣ ಎಂದು ದಾಖಲಿಸುವ ಬದಲು, 'ಆಕಸ್ಮಿಕ' ಸಾವು ಅಥವಾ 'ಕೈಮೀರಿ ಹೋದ ಪ್ರಕರಣ' ಎಂದು ಪೊಲೀಸರು ದಾಖಲಿಸಿರುವುದು.

ಅಸ್ವಾಭಾವಿಕ ಪ್ರಕರಣಗಳ ಹಿಂದಿರುವ ಸತ್ಯಾಸತ್ಯತೆಗಳನ್ನು ಪತ್ತೆ ಹಚ್ಚುವಲ್ಲಿ ಸಹಾಯವಾಗಬಲ್ಲ ಮಹಜರು, ಸಾಕ್ಷಿಗಳ ಸಂಗ್ರಹ, ಮರಣೋತ್ತರ ಪರೀಕ್ಷೆ, ನ್ಯಾಯಾಂಗ ತನಿಖೆ, ಸಾಕ್ಷಿಗಳ ವಿಚಾರಣೆ, ತೀರ್ಪು ಇವೆಲ್ಲವೂ ಸಮರ್ಪಕವಾಗಿ ನಡೆಯದೆ ಮಹಿಳೆಯರಿಗೆ ಹಾಗೂ ಅವರ ಪೋಷಕರಿಗೆ ನ್ಯಾಯ ಎಂಬುದು ಮರೀಚಿಕೆಯಾಗಿದೆ. ಇದಕ್ಕೆಲ್ಲಾ ಮೂಲ ಕಾರಣಗಳು, ಭಯ, ಬೆದರಿಕೆ, ಸರ್ವವ್ಯಾಪಿ ಭ್ರಷ್ಟಾಚಾರ, ಉದಾಸೀನತೆ, ಮಹಜರ ಮರಣೋತ್ತರ ಪರೀಕ್ಷೆ ವಿಚಾರಣೆಗಳ ಏಕತಾನತೆಗಳು ಇತ್ಯಾದಿ ಎಂದು ನಮ್ಮ ಅನುಭವದಿಂದ ಗೊತ್ತಾಗಿದೆ.

ಹೀಗಾಗಿ ಅಪರಾಧಿಗಳಿಗೆ ಶಿಕ್ಷೆಯಾಗುವುದು ಬೆರಳಣಿಕೆಯಷ್ಟು ಸಂಖ್ಯೆಯಲ್ಲಿ ಮಾತ್ರ. ಇದರಿಂದ ಕೊಲೆಪಾತಕರು ಶಿಕ್ಷೆಯಿಂದ ಮುಕ್ತಿಗೊಳ್ಳಬಹುದು ಎಂಬ ಸಂದೇಶ ಭಾವೀ ಅಪರಾಧಿಗಳಿಗೆ ಕುಮ್ಮಕ್ಕು ಕೊಟ್ಟಂತಾಗಿರುತ್ತದೆ. ಈ ಕಾರಣದಿಂದಾಗಿಯೇ ವಿವಾಹಿತ ಮಹಿಳೆಯರ ಮೇಲಿನ ಹಿಂಸಾಚಾರಗಳು ದಿನೇ ದಿನೇ ಹೆಚ್ಚುತ್ತಾ, ಮಹಿಳೆಯರು ಅತ್ಯಂತ ಪೈಶಾಚಿಕ ರೀತಿಯಲ್ಲಿ ಸಾವನ್ನಪ್ಪುವ ಪ್ರಕರಣಗಳು ಏರುತ್ತಲೇ ಸಾಗಿದೆ.

ಅಮಾಯಕ ಮಹಿಳೆಯರು ಮೇಲಿನ ಈ ಎಲ್ಲಾ ರೀತಿಯ ದೌರ್ಜನ್ಯ, ಹಿಂಸಾಚಾರ, ಕೊಲೆ, ಹೆತ್ತವರಿಗೆ ಅನ್ಯಾಯ, ಮಾನಸಿಕ ಹಿಂಸೆ, ಅಪರಾಧಿಗಳ ಖುಲಾಸೆ, ಅಪರಾಧಿಗಳಿಗೆ ಪ್ರೋತ್ಸಾಹಗಳನ್ನು ಕಂಡು ಬೇಸತ್ತ ನಾವು ಇವುಗಳಿಗೆಲ್ಲಾ ಮುಂದಾದರೂ ಪರಿಹಾರ ಹುಡುಕಲೇಬೇಕು ಎಂಬ ದೃಢ ಛಲದಿಂದ ಕಳೆದೆರಡು ವರ್ಷಗಳಿಂದ ಪ್ರಯತ್ನಿಸುತ್ತಿದ್ದೇವೆ. ಅದರ ಒಂದು ಪ್ರಾಥಮಿಕ ಹೆಜ್ಜೆಯಾಗಿ ಕಳೆದ ಜೂನ್ ೧೯ರಂದು ಗುಲ್ಬರ್ಗ, ಬಿಜಾಪುರ, ಬಳ್ಳಾರಿ, ಧಾರವಾಡ ಹಾಗೂ ಮಂಗಳೂರುಗಳಲ್ಲಿ ಸಾರ್ವಜನಿಕ ಬೈಠಕ್‌ಗಳನ್ನು ನಡೆಸಿದೆವು. ಈ ಬೈಠಕ್‌ನಲ್ಲಿ ಸುತ್ತಮುತ್ತಲಿನ ನೊಂದ ಹೆತ್ತವರು, ಪೋಷಕರು ಬಂದು ತಂತಮ್ಮ ಹೆಣ್ಣು ಮಕ್ಕಳಿಗಾದ ಅನ್ಯಾಯವನ್ನು ತೋಡಿಕೊಂಡರು. ಅಲ್ಲದೆ ವಿವಿಧ ತನಿಖಾ ಹಂತದಲ್ಲಾದ ಭ್ರಷ್ಟಾಚಾರ, ಅನ್ಯಾಯ, ಉದಾಸೀನತೆಗಳನ್ನು ಹೇಳಿಕೊಂಡರು. ಈ ಬೈಠಕ್‌ಗಳಲ್ಲಿ ಸುಮಾರು ೫೦ ಸಾವಿನ ಪ್ರಕರಣಗಳನ್ನು ಆಲಿಸಲಾಯಿತು. ಇದು ನಮ್ಮ ಮೊದಲ ಹಂತದ ಕಾರ್ಯಾಚರಣೆಯಾಗಿತ್ತು. ಈ ಕಾರ್ಯಕ್ರಮವನ್ನು ನಾವು ಬೆಂಗಳೂರಿನ ಭಾರತೀಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯ ಶಾಲೆಯ ಸಹಯೋಗದಿಂದ ಹಮ್ಮಿಕೊಂಡಿದ್ದೆವು.

ನಮ್ಮ ಮುಂದುವರೆಯುವ ಚಟುವಟಿಕೆಗಳು

ಮಹಿಳೆಯ ಬದುಕುವ ಹಕ್ಕಿನ ಆಂದೋಲನದ ೨ನೇ ಹಂತದ ಚಟುವಟಿಕೆಗಳು ಈ ಕೆಳಗಿನ ವಿಷಯಗಳತ್ತ ಕೇಂದ್ರೀಕೃತವಾಗಿರುತ್ತದೆ.

1) 'ಕ್ಷೇತ್ರ ಕಾರ್ಯಾಚರಣೆ ದಳ' (Rapid Action Force)ವೊಂದನ್ನು ಸ್ಥಾಪಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು. ಈ ದಳದ ಮುಖ್ಯ ಕಾರ್ಯವೆಂದರೆ : ಅಪಘಾತ/ಸಾವು ಸಂಭವಿಸಿದ ಸ್ಥಳಕ್ಕೆ ತಕ್ಷಣ ಧಾವಿಸುವುದು; ಲಭ್ಯವಿರುವ ಉಪಯುಕ್ತ ಸುಳಿವು-ಸಾಕ್ಷ್ಯಗಳನ್ನು ಸಂಗ್ರಹಿಸುವುದು ಹಾಗೂ ದೂರು ದಾಖಲಿಸಲು ಪ್ರಾಥಮಿಕ ಹಂತದ ಸಹಾಯ ನೀಡುವುದು.

2) ಅಸ್ವಾಭಾವಿಕ ಸಾವಿನ ಪ್ರಕರಣಗಳ ತನಿಖೆ-ವಿಚಾರಣೆಗಳನ್ನು ಕೈಗೊಳ್ಳುವ ವ್ಯಕ್ತಿಗಳು ಹಾಗೂ ಸಂಸ್ಥೆಗಳ ಮೇಲೆ ನಿರಂತರ ನಿಗಾ ವಹಿಸುವಂತಹ ಒಂದು ಮೇಲ್ವಿಚಾರಣಾ ಘಟಕವನ್ನು ಸ್ಥಾಪಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು.

3) 'ಸತ್ಯ ಆಯೋಗ'ದಲ್ಲಿ ವ್ಯಕ್ತವಾಗುವ ಸಲಹೆಗಳ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ಸಂಬಂಧಪಟ್ಟ ಕಾನೂನುಗಳಿಗೆ ಸೂಕ್ತ ತಿದ್ದುಪಡಿ/ಮಾರ್ಪಾಡುಗಳನ್ನು ತರಲು ಕಾರ್ಯಾಂಗ, ನ್ಯಾಯಾಂಗ ಅಥವಾ ಶಾಸಕಾಂಗಳನ್ನು ಬಳಸಿಕೊಳ್ಳುವಂತೆ ಆಗ್ರಹಿಸುವುದು.

4) ಮಹಿಳೆಯ ಬದುಕುವ ಹಕ್ಕಿನ ರಕ್ಷಣೆಗಾಗಿ ಅಗತ್ಯ ಆಜ್ಞೆಗಳನ್ನು ಹೊರಡಿಸುವ ನಿರೀಕ್ಷೆಯಿಂದ ಉಚ್ಚನ್ಯಾಯಾಲಯ/ಶ್ರೇಷ್ಠ ನ್ಯಾಯಾಲಯಗಳಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಹೂಡುವುದು.

5) ಕಳೆದ ೨ ವರ್ಷಗಳ ನಮ್ಮ ಅಧ್ಯಯನದ ಆಧಾರದ ಮೇಲೆ ಮಹಿಳಾ ಅಸ್ವಾಭಾವಿಕ ಸಾವುಗಳ ತನಿಖೆಗೆ ಸಂಬಂಧಪಟ್ಟ ನೀತಿ ನಿಯಮ ಕಾನೂನುಗಳಿಗೆ ಅನ್ವಯವಾಗುವಂತೆ ನಾವು ಒಂದು 'ಮಾದರಿ ಕೈಪಿಡಿ'ಯನ್ನು ಸಿದ್ಧಪಡಿಸಿದ್ದೇವೆ. ಈ ಕೈಪಿಡಿಯನ್ನು ಅಧಿಕೃತವಾಗಿ ಅಂಗೀಕರಿಸಿ ಸಂಬಂಧಪಟ್ಟವರೆಲ್ಲ ಅದನ್ನು ಪಾಲಿಸುವಂತೆ ಆಗ್ರಹಿಸುವುದು.

6) ನೊಂದ ಕುಟುಂಬಗಳಿಗೆ ಅಗತ್ಯವಿರುವ ಉಚಿತ ಕಾನೂನು ಸಲಹೆಗಳನ್ನು ನೀಡುವ ಸಲುವಾಗಿ ಅರೆ-ಕಾನೂನು ಸಲಹಾ ಸಮಿತಿಯನ್ನು ರಚಿಸಲು ಪ್ರಯತ್ನಿಸುವುದು ಎಲ್ಲಕ್ಕಿಂತ ಮಿಗಿಲಾಗಿ ನಾವು ಈ ಸತ್ಯ ಆಯೋಗ ವತಿಯಿಂದ ಕಂಡುಕೊಳ್ಳುವ ಅಂಕಿ ಅಂಶ-ವಾಸ್ತವಾಂಶಗಳ ಆಧಾರದ ಮೇಲೆ ನ್ಯಾಯಾಂಗ ಸಮಿತಿಯೊಂದನ್ನು ರಚಿಸಿ ಕಳೆದ ಹತ್ತು ವರ್ಷಗಳಲ್ಲಿ ಅನ್ಯಾಯ-ದಯಾನೀಯವಾಗಿ ಸಾವನ್ನಪ್ಪಿದ ವಿವಾಹಿತ ಮಹಿಳೆಯರ ಪ್ರಕರಣಗಳನ್ನು ಪುನರ್ ಪರಿಶೀಲಿಸಿ ಮರು ತನಿಖೆ ನಡೆಸುವಂತೆ ಶ್ರೇಷ್ಠ ನ್ಯಾಯಾಲಯವನ್ನು ಆಗ್ರಹಿಸುವುದು.

7) ಅನುಮಾನಾಸ್ಪದವಾಗಿ ಘಟಿಸುವ ವಿವಾಹಿತ ಮಹಿಳೆಯರ ಸಾವುಗಳ ತನಿಖೆಗಳ ಮೇಲೆ ಪ್ರತಿ ಹಂತದಲ್ಲೂ ನಿಗಾ ವಹಿಸಲು ಸಹಕಾರಿಯಾಗುವಂತೆ ರಾಜ್ಯದ ಎಲ್ಲಾ ಮಹಿಳಾ ಸಂಘಟನೆಗಳೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಕಾರ್ಯ ನಿರ್ವಹಿಸುವುದು.

ವಿಮೋಚನಾ ಕರಪತ್ರದಿಂದ

ಬೆಂಗಳೂರಿನಲ್ಲಿ ಮಹಿಳೆಯರ ಅಸಹಜ ಸಾವು

	ಕೊಲೆ	ಆತ್ಮಹತ್ಯೆ	ಅಪಘಾತ	ಒಟ್ಟು
1997	157	546	430	1,133
1998	126	723	399	1,248
1999	60	441	117	618

ಕೃಪೆ - ಫ್ರಂಟ್ ಲೈನ್

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ,

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 100 ರೂ

ಸಂ. ಮಂಡಳಿ

REGD No. KRNA 324

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067